# 'ಕಾವ್ಯಶ್ರೀ' 'ಕಾವ್ಯಾನಂದ'

•

ಸಂಭಾವನಾಗ್ರಂಥ

•

ಕಾವ್ಯಾನಂದ ಸನ್ಮಾನ ಸಮಿತಿ, ವಿಜಾಪುರ.

# ಕಾವ್ಯಶ್ರೀ - "ಕಾವ್ಯಾನಂದ"

ಶ್ರೀ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'
ಅವರಿಗೆ ಅರ್ಪಿಸಿದ ಸನ್ಮಾನ ಗ್ರಂಥ

ಸಂಪಾದಕರು

'ಸತ್ಯಾನಂದ' 'ಮೇಘಮಿತ್ರ'

ಶ್ರೀ ಕಾವ್ಯಾನಂದ ಸನ್ಮಾನ ಸಮಿತಿ
ವಿಜಾಪುರ.

**ಪ್ರಕಾಶನ-**

ಕಾವ್ಯಾನಂದ ಸನ್ಮಾನ ಸಮಿತಿ
ವಿಜಾಪುರ.

೧೯೭೯

**ಮುದ್ರಣ-**

ಶ್ರೀ ಶಕ್ತಿ ಮುದ್ರಣಾಲಯ
ವಿಜಾಪುರ ೧.

ಕನ್ನಡದ 'ಕಾವ್ಯಾನಂದ'
ಶ್ರೀ ಸಿದ್ದಯ್ಯ ಪುರಾಣಿಕ I. A. S. ಅವರಿಗೆ

# "ಕಾವ್ಯಶ್ರೀ"

ಅಭಿಧಾನವಿತ್ತು ಅರ್ಪಿಸಿದ

# ಸಂಭಾವನಾಗ್ರಂಥ

**ಸನ್ಮಾನ್ಯ ಸಿದ್ಧಯ್ಯ ಪುರಾಣಿಕ ಅವರೆ,**

ಕನ್ನಡದ ಕಾವ್ಯಾನಂದ, ಉದ್ದಾಮ ಲೇಖಕ, ಸರಸ ವಾಗ್ಮಿ, ದಕ್ಷ ಅಧಿಕಾರಿ, ಸಚ್ಚರಿತ ಸಮ್ಯಕ್ ಬುದ್ಧಿ ಜೀವಿಗಳೆಂದು ಕನ್ನಡ ನಾಡಿಗೆಲ್ಲ ಸುಪರಿಚಿತರಾದ ತಮ್ಮನ್ನು ಆತ್ಮೀಯ ಆದರದಿಂದ ಸನ್ಮಾನಿಸಲು ನಮಗೆಲ್ಲ ಅತೀವ ಆನಂದವೆನಿಸುತ್ತದೆ.

ಕನ್ನಡ ಸಾರಸ್ವತ ಪ್ರಪಂಚಕ್ಕೆ ತಾವು ಸುಮಾರು ಎರಡುವರೆ ದಶಕ ಗಳಿಗಿಂತಲೂ ಹೆಚ್ಚುಕಾಲ ಅವಿರತವಾಗಿ ಸಲ್ಲಿಸುತ್ತ ಬಂದ ಕನ್ನಡ ಸಾಹಿತ್ಯ ಸೇವೆಯ ಗರಿಮೆಗಾಗಿ ನಾವು ತಮಗೆ

## "ಕಾವ್ಯಶ್ರೀ"

ಎಂಬ ಅಕ್ಕರೆಯ ಅಭಿಧಾನವಿತ್ತು ಹೃತ್ಪೂರ್ವಕವಾಗಿ ಈ ಗ್ರಂಥ ವನ್ನು ಸಮರ್ಪಿಸುತ್ತಲಿದ್ದೇವೆ.

**ಕಾವ್ಯಶ್ರೀ ಕಾವ್ಯಾನಂದರೆ,**

ತಾವು ಕಾವ್ಯಾನಂದರಾಗಿ ಕನ್ನಡ ಕಾವ್ಯಪ್ರಪಂಚಕ್ಕೆ 'ಜಲಪಾತ' 'ಕರುಣಾ ಶ್ರಾವಣ' 'ಮಾನಸ ಸರೋವರ' 'ಕಲ್ಲೋಲ ಮಾಲೆ' 'ಮೊದಲು ಮಾನವನಾಗು' 'ವಿಕಾಸ ವಾಣಿ' ಹಾಗು 'ತುಪ್ಪಾರೊಟ್ಟಿ ಗೇ ಗೇ ಗೇ' ಹೀಗೆ ಏಳು ಕವನ ಸಂಕಲನಗಳನ್ನು ಅರ್ಪಿಸಿದ್ದೀರಿ. ನಾಟಕ ಲೇಖಕರಾಗಿ 'ಆತ್ಮಾರ್ಪಣ' 'ರಜತ ರೇಖೆ' ಮತ್ತು 'ಭಾರತ ವೀರ' ಮೊದಲಾದ ಆರು ನಾಟಕಗಳನ್ನು ಇತ್ತಿದ್ದೀರಿ. ಕಥೆಗಾರರಾಗಿ 'ತುಷಾರ ಹಾರ' ಮತ್ತು 'ಕಥಾಮಂಜರಿ' ಗಳನ್ನು ಸಲ್ಲಿಸಿದ್ದೀರಿ. ಕಾದಂಬರಿಕಾರರಾಗಿ 'ತ್ರಿಭುವನ ಮಲ್ಲ' ದಂಥ ಮೌಲಿಕ ಬ್ರಹತ್ ಕಾದಂಬರಿಯನ್ನು ಪ್ರಕಟಿಸಿದ್ದೀರಿ. ಚರಿತ್ರೆಕಾರರಾಗಿ, ಸಂಶೋಧಕರಾಗಿ ಹತ್ತೆಂಟು ಜನ ವಿದ್ವಾಂಸರು ಕೂಡಿ ಮಾಡುವ ಮಹಾಕಾರ್ಯವನ್ನು ಏಕಾಂಗ ವೀರರಾಗಿ 'ಶರಣ ಚರಿತಾಮೃತ' ದಂಥ ಈ ಶತಮಾನದ ಮೇರುಕೃತಿಯೊಂದನ್ನು ಕನ್ನಡ ಗದ್ಯ ಸಾಹಿತ್ಯಕ್ಕೆ ನೀಡಿದ್ದೀರಿ ಅಲ್ಲದೆ ಐದು ಗ್ರಂಥಗಳನ್ನು ಸಂಪಾದಿಸಿ ಕಾರ್ಯ ನಿರ್ವಹಿಸಿದ್ದೀರಿ. ವಿಶಿಷ್ಟ ಭಾವ, ಭಾಷೆ, ವಸ್ತು, ಶೈಲಿ ಹಾಗು ಶಿಲ್ಪಗಳ ಮೂಲಕ ತಮ್ಮ ಮೌಲಿಕ ಸಾಹಿತ್ಯ ಕೃತಿಗಳಿಂದ ಕನ್ನಡ ಸಾಹಿತ್ಯಭಾಂಡಾರವನ್ನು ಶ್ರೀಮಂತಗೊಳಿಸಿದ್ದೀರಿ.

**ಸರಸ ಶೈಲಿಯ ಸಹೃದಯರೆ,**

ತಮ್ಮ ಕವಿತೆಗಳು "ಹೂವುಗಳ ಹೃದಯವನು ಹೊಬಿಸಿಲು ಹೊಕ್ಕಂತೆ, ಹೃದಯದಿಂದ ಬಂದು ನೇರವಾಗಿ ಹೃದಯಕ್ಕೆ ಮುಟ್ಟು ವಂತಹವು" – "ತಮ್ಮ ಕಾವ್ಯ ರಚನೆಯ ಅಸ್ತಿಭಾರಕ್ಕೆ ತತ್ವಗಳ ತೂಕ ಇರುವದರಿಂದಲೇ ನುಡಿಗಳಲ್ಲಿ ಬೆಂಕಿಯ ಜತೆ ಜತೆಗೆ ಬೆಳಕು ನುಗ್ಗುತ್ತದೆ." "ದೇಶದ ಏಳಿಗೆಗಾಗಿ ಜನಗಳ ಹಿತಕ್ಕಾಗಿ ಕವಿಗಿರುವ ಕಾವು ತಮ್ಮ ಪದ್ಯಗಳಲ್ಲಿ ಕಾಣುವದು." ಹಾಗು ತಮ್ಮ ನಾಟಕ, ಕಥೆ, ಕಾದಂಬರಿ, ಚರಿತ್ರೆ-ಗಳಲ್ಲಿಯೂ ಈ ಗುಣ ಸ್ಫುಟವಾಗಿ ಮೂಡಿಬಂದಿರುವದು. ತಮ್ಮದು ಬಹಳ ಹಸನಾದ ಕಾವ್ಯ ಶೈಲಿ, ತಿರುಳ್ಗನ್ನಡದ ಸರಣಿ ಸರಸನಾಡುತ್ತದೆ.



ಭಾವ ಲಾಲಿತ್ಯ, ಶಬ್ದಮಾಧುರ್ಯ, ಭಾಷೆ ವೈಭವದಿಂದ ಕಾವ್ಯಸೃಜನ ಸ್ವತ್ವಯುತವಾಗಿದೆ.

**ಸಮ್ಯಕ್ ಸಾಹಿತಿಗಳೆ,**

ಸುಮಾರು ಇಪ್ಪತ್ತೈದು ವರುಷಗಳಿಗಿಂತ ಹೆಚ್ಚು ಕಾಲ ತಾವು ಉಚ್ಚ ಅಧಿಕಾರ ಸ್ಥಾನದಲ್ಲಿದ್ದುಕೊಂಡರೂ ಸಹಿತ ಕನ್ನಡದ ಅನವರತ ಜಾಗ್ರತ ಸಾಹಿತಿಗಳಾಗಿದ್ದೀರಿ. ಪಾಂಡಿತ್ಯ, ಸಹಜಪ್ರೇಮ, ಪ್ರಾಮಾಣಿಕತೆ, ನಿಷ್ಠೆ, ಕಾರ್ಯ ಪ್ರಿಯತೆ, ಸದಭಿರುಚಿ, ಮೊದಲಾದ ಅಪೂರ್ವ ಆದರ್ಶಗಳಿಂದ ಭೂಷಿತರಾದ ತಾವು ಕನ್ನಡ ನಾಡಿನ ಅನೇಕ ತರುಣ ಲೇಖಕ ಕವಿಗಳಿಗೆ ದಾರಿ ದೀಪವಾಗಿದ್ದೀರಿ, ಪ್ರೇರಕ ಶಕ್ತಿಗಳಾಗಿದ್ದೀರಿ.

ಉನ್ನತ ಆಡಳಿತಾಧಿಕಾರಿಗಳಾಗಿಯೂ ತಾವು ಮಾಡಿದ ಲೋಕಹಿತ ಕಾರ್ಯ ಪ್ರಶಂಸನೀಯವಾಗಿವೆ ತಹಶೀಲದಾರ, ಪ್ರಾಂತ ಆಫೀಸರ, ಜಿಲ್ಲಾಧಿಕಾರಿ, ಶಿಕ್ಷಣ, ಹಣಕಾಸಿನ, ಇಲಾಖೆಯ ಸಹಾಯಕ ಕಾರ್ಯದರ್ಶಿಗಳಾಗಿ ಹಾಗು ಇದೀಗ ಮೈಸೂರಪ್ರದೇಶದ ಸಾರಿಗೆ ಇಲಾಖೆಯ ಪ್ರಧಾನ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದು "ಯಾವ ಕೆಲಸಕ್ಕೆ ಕರೆದರೂ ಸಿದ್ಧಯ್ಯ" ರಾಗಿ ಸಂಪೂರ್ಣ ಸಫಲರಾಗಿದ್ದೀರಿ. ತಾವು ಜೀವನದಲ್ಲಿ ಗಳಿಸಿದ ಇಂಥ ಪ್ರಾಂಜಲ ಕಾರ್ಯಸಿದ್ಧಿಯು ನಮಗೆಲ್ಲ ಚಿರಸ್ಫೂರ್ತಿಯನ್ನು ನೀಡಲಿ ಎಂದು ಹಾರ್ದಿಕವಾಗಿ ಹಾರೈಸುತ್ತೇವೆ.

ಸಿದ್ಧ ಬಾಳನು ಬಾಳಿದ ಸಿದ್ಧಯ್ಯನವರೇ, ತಮ್ಮ ಪರಿಪಕ್ವ ಜೀವನದ ಪ್ರತಿಫಲವಾಗಿ ಇನ್ನೂ ತಮ್ಮಿಂದ ಅನೇಕ ಮೌಲಿಕ ಬ್ರಹತ್ ಸಾಹಿತ್ಯ ಹಾಗು ಲೋಕ ಜೀವನದ ಶ್ರೇಯಕ್ಕಾಗಿ ಸೇವೆಗೈಯುತ್ತಿರುವ ತಮಗೆ ದೀರ್ಘ ಆಯುರಾರೋಗ್ಯ, ಹಾಗು ಸಂಪದಭಿವೃದ್ಧಿ ಲಭಿಸಲಿ ಎಂದು ಮನತುಂಬಿ ಆಶಿಸುತ್ತೇವೆ.

ವಿಜಾಪೂರ — ಅಧ್ಯಕ್ಷ **ಡಾ. ಕೆ. ಮುದ್ದಣ್ಣ**

೨೦-೧೧-೬೯ — ಹಾಗು

ಸನ್ಮಾನ ಸಮಿತಿ ಸದಸ್ಯರು ವಿಜಾಪುರ ನಗರ

## ಸಂಪಾದಕರಿಂದ

ಕನ್ನಡ ಸಾಹಿತ್ಯ ರಂಗದಲ್ಲಿ 'ಕಾವ್ಯಾನಂದ' ರದು ಒಂದು ಸ್ಥಾನ. ಅಂದಿನ ಹೈದರಾಬಾದ ಕನ್ನಡ ಜಿಲ್ಲೆಗಳಲ್ಲಿ ಉರ್ದು ಇಂಗ್ಲೀಷ ಚಕ್ರವಾತಗಳ ಮಧ್ಯದಲ್ಲಿ ಕನ್ನಡ ದೀಪವನ್ನು ಹೊತ್ತಿಸಿ ಬೆಳಗಿಸಿದವರು ಸಿದ್ಧಯ್ಯನವರು. ತಮ್ಮ ಸತತವಾದ ಹಿರಿಯ ಅಧಿಕಾರ ಕಾರ್ಯ ಭಾರ ದಲ್ಲಿಯೂ ಅವ್ಯಾಹತವಾಗಿ ಎರಡುವರೆ ದಶಕಗಳಿಂದ ಕನ್ನಡ ಸಾಹಿತ್ಯ ರಚನೆ ಗೈಯುತ್ತ ಬಂದವರು. ಇಂಥ ಕನ್ನಡ ಕುಲಶ್ರೇಷ್ಠರನ್ನು ವಿಜಾಪುರ ನಗರದ ಪರವಾಗಿ ಸನ್ಮಾನಿಸಿ 'ಕಾವ್ಯಶ್ರೀ' ಅಭಿಧಾನವಿತ್ತು ಗೌರವಿ ಸುತ್ತ ಈ 'ಕಾವ್ಯಶ್ರೀ ಕಾವ್ಯಾನಂದ' ಕೃತಿಯನ್ನು ಅವರಿಗೆ ಆತ್ಮೀಯತೆ ಯಿಂದ ಅರ್ಪಿಸಲಾಗುತ್ತಿದೆ.

'ಕಾವ್ಯಶ್ರೀ' ಕಾವ್ಯಾನಂದರ ಸಮಗ್ರ ಸಾಹಿತ್ಯ ಸಮೀಕ್ಷೆಯನ್ನು ಈ ಪುಟ್ಟ ಪ್ರಕಟನೆಯು ಸಾಧಿಸಲಾರದು. ಆದರೂ ಅವರ ಎಲ್ಲ ಕೃತಿಗಳ ಸಂಕ್ಷಿಪ್ತ ಪರಿಚಯ ಮೂಡಿ ಬರುವಂತೆ ಪ್ರಯತ್ನಿಸಲಾಗಿದೆ. ಇದರ ಮುಖಾಂತರ ವಾಚಕರಿಗೆ 'ಕಾವ್ಯಾನಂದ'ರ ಸಾಹಿತ್ಯ ಸಾಧನ ಮಹಾ ದ್ವಾರದ ಅರಿವಾದೀತೆಂದು ಭಾವಿಸಿದ್ದೇವೆ.

ನಮ್ಮೀ ಪ್ರಸ್ತುತ ಸಮ್ಯಕ್ ಕಾರ್ಯದಲ್ಲಿ ಸಹಭಾಗಿಗಳಾದ ಲೇಖಕ ಕವಿ ಬಂಧುಗಳಿಗೆ ಕೃತಜ್ಞತೆಗಳು.

ಎಂದಿನಂತೆ ಈಗಲೂ ಸಮಯಕ್ಕೆ ಸರಿಯಾಗಿ ಶಕ್ತಿ ಪ್ರೆಸ್ಸಿನಲ್ಲಿ ಮುದ್ರಿಸಿ ಕೊಟ್ಟು ಉಪಕರಿಸುತ್ತಿರುವ ಸಂಗಮೇಶ ಅವರಿಗೆ ಅಭಿನಂದನೆಗಳು.

**ಸಂಪಾದಕರು**

ವಿಜಾಪೂರ ಸತ್ಯಾನಂದ
೨೦-೧೧-೬೯ ಮೇಘ ಮಿತ್ರ

# ಪರಿವಿಡಿ


| | | | |
|---|---|---|---|
| ೧ | ನೆನಹುಗಳು | 'ಸತ್ಯಾನಂದ' | ೧ |
| ೨ | ಕರುಣಾ ಶ್ರಾವಣ | ಶಂ. ಗು. ಬಿರಾದಾರ | ೬ |
| ೩ | ಕಾವ್ಯಾನಂದರ ಕಲ್ಲೋಲಮಾಲೆ | ಬಿ. ಎ. ಸನದಿ | ೧೫ |
| ೪ | ಶರಣ ಚರಿತಾಮೃತ | ಶಾಂತರಸ ರಾಯಚೂರ | ೨೬ |
| ೫ | ನಾಕಂಡ ಸಿದ್ಧಯ್ಯ ಪುರಾಣಿಕರು | ಎಸ್. ಜಿ. ಹಿರೇಮಠ | ೩೨ |
| ೬ | ರಜತ ರೇಖೆ | ಎಂ. ಎಂ. ಬ್ಯಾಲಾಳ | ೩೬ |
| ೭ | ಭಾರತ ವೀರ | ಸ. ದ. ಹಕೀಮ | ೩೮ |
| ೮ | ಕಾವ್ಯ ಶ್ರೀ ಕಾವ್ಯಾನಂದ | ಪರುಶರಾಮ ಚಿತ್ರಗಾರ | ೪೨ |
| ೯ | ಕಾವ್ಯಾನಂದರು | ಜಿ ಎಸ್. ಅನ್ನದಾನಿ | ೪೪ |
| ೧೦ | ಸ್ನೇಹ ಸಂಚಯ | ಇಟಗಿ ರಾಘವೇಂದ್ರ | ೪೫ |
| ೧೧ | ಕಾವ್ಯಾನಂದರ ಕಾವ್ಯವಾಣಿ | 'ಮೇಘಮಿತ್ರ' | ೪೭ |
| ೧೨ | ಕಾವ್ಯಾನಂದರ ಕೃತಿಗಳು | — | ೫೩ |

# ನೆನಹುಗಳು

ಅವಾಗ ೧೯೩೫ನೇ ಇಸ್ವಿ. ಕಲಬುರ್ಗಿಯ ಶ್ರೀ ಗುರುಬಸವ ಮಠದಲ್ಲಿ ನಾಟಕ ಪ್ರಯೋಗ. ' ಬೆಳವಡಿ ಮಲ್ಲಮ್ಮ ' ಎಂಬ ಐತಿಹಾಸಿಕ ನಾಟಕದಲ್ಲಿ ಛತ್ರಪತಿ ಶಿವಾಜಿಯ ಪಾತ್ರ ಮಾಡಿದವರು ಒಬ್ಬ ದಿವ್ಯ ವಿದ್ಯಾರ್ಥಿ. ತನ್ನ ಖಡ್ಗವನ್ನು ಝಳಪಿಸುತ್ತ, ಬೆಳವಡಿ ಮಲ್ಲಮ್ಮ ರಾಣಿಗೆ ವೀರ ರಸದಲ್ಲಿ ಏನೇನೋ ನುಡಿಯುತ್ತಿದ್ದಾರೆ. ಪರಿಣಾಮ ಸೋಲೋ ಗೆಲುವೋ ತಿಳಿದಿರಲಿಲ್ಲ. ಸಂಭಾಷಣೆ ಚೆನ್ನಾಗಿತ್ತು; ಸ್ಫೂರ್ತಿದಾಯಕವಿತ್ತು. ನನಗೆ ಆಗ ೧೫ ವಯಸ್ಸು. ಹರ್ಷಭರಿತನಾದೆ. ಆ ಶಿವಾಜಿ ಮಹಾರಾಜರೇ ಈಗಿನ ' ಕಾವ್ಯಾನಂದ ' ರು. ಆ ನಾಟಕ ಬರೆದವರೂ, ಪಾತ್ರ ವಹಿಸಿದವರೂ, ದಿಗ್ದರ್ಶಕರೂ ಕಾವ್ಯಾನಂದರೆ. ಆಗ ಅವರ ವಯಸ್ಸು ೨೦ ಇರಬಹುದು. ಅವರ ಸಹ ನಟರಲ್ಲಿ ಶ್ರೀ ಗುರುಶಾಂತಯ್ಯ (ಕೊಪ್ಪಳ) ಮಹಾಂತಯ್ಯ (ಕನಕಗಿರಿ); ಸಿದ್ಧರಾಮಪ್ಪ (ಕೊಪ್ಪಳ) ಮತ್ತು ಕಲಿಗಣನಾಥ (ಗಂಗಾವತಿ) ಅಗ್ರಗಣ್ಯರು.

ಅದೇ ವರ್ಷ ವಿದ್ಯಾರ್ಥಿ ಪ್ರವಾಸಕ್ಕೆಂದು ಸೊಲ್ಲಾಪುರ ಮತ್ತು ವಿಜಾಪುರ ನೋಡಿದ್ದಾಯಿತು. ಪ್ರವಾಸದ ದಿನಚರಿ ಬಹುಕಾವ್ಯಮಯವಾಗಿ ಬರೆದಿದ್ದೆ. ಅವಲ್ಲದೆ ಅರುಣೋದಯದ ವರ್ಣನೆಯನ್ನೂ ಚೆನ್ನಾಗಿ ಚಿತ್ರಿಸಿದ್ದೆ ಸುಮಾರು ೧೫ ಪುಟವಾಗಿರಬಹುದು. ಅದನ್ನು ನೋಡಲು ಕಾವ್ಯಾನಂದರು ನನ್ನ ಕೋಣೆಗೆ ಬಂದರು. ಅದು ಮೊದಲನೇ ಪರಿಚಯ. ಅವರು ಆ ದಿನಚರಿಯನ್ನು ಬಹಳೇ ಮೆಚ್ಚಿದರು. ಅದೇ ಪ್ರಥಮ ಸಾಹಿತ್ಯ ಸಂಪರ್ಕ. ಅಷ್ಟರಲ್ಲಿಯೇ ನನ್ನ ಇಂಗ್ಲೀಷ ಗುರುಗಳು ನನಗೆ "ಮಿಲ್ಟನ್" ಎಂದು ಕರೆಯಲಾರಂಭಿಸಿದರು. ಕಾವ್ಯನಂದರು ಅದಕ್ಕೆ ಪ್ರೋತ್ಸಾಹ ನೀಡಿ ನೀರೆರದರು.

ಎರಡು ವರ್ಷಗಳಾದ ಮೇಲೆ ನಾವಿಬ್ಬರು ಒಂದೇ ಕೋಣೆಯಲ್ಲಿರುವ ಸುಯೋಗ ಲಭಿಸಿತು. ಅವರ ತಂದೆಯವರು ಲಿಂ. ಪಂಡಿತ ಕಲ್ಲಿನಾಥ

ಶಾಸ್ತ್ರಿಗಳು; ಮತ್ತು ಅವರ ಅಜ್ಜಂದಿರು ಚಿನ್ನ ಕವಿಗಳು. ಆ ಪರಂಪರೆಯಲ್ಲಿ ಬೆಳೆದದ್ದಕ್ಕಾಗಿ ಅವರಲ್ಲಿ ಕನ್ನಡ ಮತ್ತು ಸಂಸ್ಕೃತದ ಪ್ರಭಾವ ತಾನೆ ಮನೆಮಾಡಿಕೊಂಡಿತು. ಇಂಗ್ಲೀಷಿನಲ್ಲಿಯೂ ಪರಿಣತರು ಉರ್ದು ಸ್ವಲ್ಪ ಕುಂಠಿತ. ಲೆಖ್ಖದಲ್ಲಿ ಶೂನ್ಯ. ಅಂತೂ ಹೇಗೋ ಪಾಸಾಗುತ್ತಲಿದ್ದರು. ನನಗೆ ಸಾಹಿತ್ಯದಲ್ಲಿ ಗುಣಗಳನ್ನು ಪಡೆಯುವದಕ್ಕಷ್ಟೇ ಆಸಕ್ತಿ. ಮೆಚ್ಚಿನ ವಿಷಯ ಗಣಿತ. ಉರ್ದು ಮತ್ತು ಇಂಗ್ಲೀಷ ನನ್ನ ಮೆಚ್ಚಿಗೆಯ ವಿಷಯಗಳಾದರೂ ಕಾವ್ಯ ಬರೆಯಲಿಲ್ಲ.

ಒಮ್ಮೆ ಊರಿನ ಉಪವನಕ್ಕೆ ಹೋಗಿದ್ದೆವು ಮೊದಲನೇ ಸಲ ಆಕಾಶವಾಣಿ ಕೇಳಿದ್ದು. ಅಂದು ಸಿದ್ದಯ್ಯನವರು ಒಮ್ಮೆಲೆ ಹಾಸ್ಟೇಲಿಗೆ ಹೋಗಲು ಎದ್ದರು. ನಾನೂ ಬಸವಣ್ಣನಂತೆ ಹಿಂಬಾಲಿಸಿದೆ. ಅವರೂ ಮೌನ, ನಾನೂ ಮೌನ. ಮರುದಿನ ಮುಂಜಾನೆ, ಒಂದು ಕವನ ಬರೆದು ನನ್ನ ಕೈಯಲ್ಲಿಟ್ಟರು. 'ಬಾರೆ ಸಂಗೀತ ದೇವಿ' ಎಂದು. ನಾನೂ ವಿನಮ್ರವಾಗಿ ಆಂಗ್ಲ ಕವಿತೆಯೊಂದನು ಅವರಿಗೆ ಅರ್ಪಿಸಿದೆ- 'Glow Worms' ಎಂದು. ಅವೆರಡೂ ಕವನಗಳು ಒಂದೇ ರಾತ್ರಿ ರಚಿತವಾದರೂ ಒಬ್ಬರಿಗೊಬ್ಬರು ಹೇಳಿರಲಿಲ್ಲ

ಅವರೊಮ್ಮೆ ಸ್ವದೇಶಿ ಭಾವನೆಗಳಿಗೆ ಮನಸೋತು "ಆಂಗ್ಲ ಭಾಷೆಯ ಸೇವೆ ಮಾಡುವದರಿಂದ ಏನು ಲಾಭ?" ಎಂದು ಕೇಳಿ, ಕನ್ನಡ ಗ್ರಂಥಗಳನ್ನು ನನಗಾಗಿ ತರಲು ಪ್ರಾರಂಭ ಮಾಡಿದರು. 'ಕೊಳಲು' 'ನವಿಲು' ನಾನೋದಿದ ಕಾವ್ಯ. ಆಗ- ಅಷ್ಟೇ ನನ್ನ ಕನ್ನಡ ಅಭ್ಯಾಸ. ಅವರ ಕೆಲವು ಕವನಗಳು ಅದೇ ಆಗ ಧಾರವಾಡದ ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದನ್ನು ನೋಡಿದೆನು. ನಮ್ಮ ಕವನಗಳೂ ಪ್ರಕಾಶ ಪಡೆಯಬಹುದೆ? ಎಂದುಕೊಂಡೆ. ಪ್ರಕಟನೆ ಅಸಂಭವವೆಂದೇ ಭಾವನೆ.

ನಾಡಹಬ್ಬವೆಂದರೆ ನನಗೆ ಗೊತ್ತಿರಲಿಲ್ಲ. ಪ್ರೊ. ಬಿ. ಎಂ. ಶ್ರೀಕಂಠಯ್ಯನವರಿಂದ ಪರಿಚಯವಾಯಿತು. ಸಾಹಿತ್ಯದ ಅಭಿರುಚಿ ಹುಟ್ಟಿಸಿದವರು ಶ್ರೀ ದ. ರಾ. ಬೇಂದ್ರೆ, ಮುಗಳಿ, ವೀ. ಕೃ. ಗೋಕಾಕ, ವೀ. ಸೀತಾ



ರಾಮಯ್ಯ, ಆನಂದಕಂದ ಮುಂತಾದವರು. ರಾಜಕೀಯ ಚೇತನವನ್ನು ಹುಟ್ಟಿಸಿದವರು 'ಕರ್ನಾಟಕ ಗಾಂಧಿ' ಎಂದು ಹೆಸರು ಪಡೆದ ಶ್ರೀ ಹರ್ಡೇಕರ ಮಂಜಪ್ಪನವರು. ಆ ಕಾಲಕ್ಕೆ ಕನ್ನಡವೆಂದರೆ ಅಸಂಸ್ಕೃತ ಮತ್ತು ಅಸಭ್ಯ ಭಾಷೆಯೆಂದು ನೈಜಾಮ ಪ್ರಾಂತ ತಿಳಿಯಲ್ಪಡುತ್ತಿತ್ತು. ಕನ್ನಡ ಪ್ರಾಧ್ಯಾಪಕರಾದ ಶ್ರೀ ಭೀಮಶೇನರಾವ ತವಗ ಇವರ ಪ್ರಯತ್ನದಿಂದ ನಮ್ಮ ಕಾಲೇಜಿನಲ್ಲಿ ಕನ್ನಡ ಸಂಘ ಸ್ಥಾಪಿತವಾಯಿತು. ಅದರ ಮುಖ್ಯ ಕಾರ್ಯಕರ್ತರು ಶ್ರೀ ಸಿದ್ಧಯ್ಯ ಪುರಾಣಿಕರು.

ಗದ್ದುಗೇ ಮಠದಲ್ಲಿ ವೀರಶೈವ ಉಚಿತ ಪ್ರಸಾದ ನಿಲಯ ಒಂದು ಸ್ಥಾಪಿತವಾಗಿ ವಿದ್ಯಾರ್ಥಿಗಳ ಚಟುವಟಿಕೆಗಳು ಕಾಣುತ್ತಲಿದ್ದವು. ಯಾವ ಸಾಹಿತಿಗಳೇ ಆಗಲಿ ಕಲಬುರ್ಗಿಗೆ ಬಂದಲ್ಲಿ ಅವರಿಗೆ ಅಲ್ಲಿ ಮಾನ ಕೊಡಲಾಗುತ್ತಿತ್ತು. ಅಂಥ ಸಮಯದಲ್ಲಿ ಮುಖ್ಯ ವಕ್ತಾರರು ಶ್ರೀ ಕಾವ್ಯಾನಂದರೆ

ಕಾಲೇಜಿನಲ್ಲಿ ಅವರು Scholor ಎಂದು ಆಗಲೇ ಪ್ರಸಿದ್ಧಿ ಪಡೆದಿದ್ದರು. ಮ್ಯಾಟ್ರಿಕ್ ಪರೀಕ್ಷೆಯ ಕನ್ನಡ ಮತ್ತು ಇಂಗ್ಲೀಷಿನಲ್ಲಿ ನಿಜಾಂ ಸ್ಟೇಟಿನಲ್ಲಿಯೇ ಹೆಚ್ಚು ಗುಣಗಳನ್ನು ಗಳಿಸಿದ್ದರು. ಅವರು ಪಠ್ಯಪುಸ್ತಕ ಓದುವದು ಕಡಿಮೆ, ಪಠ್ಯೇತರ ಪುಸ್ತಕ ಓದುವದು ಹೆಚ್ಚು. ನಮ್ಮ ಬೋರ್ಡಿಂಗಿನಲ್ಲಿ ಅವರನ್ನು ಫ್ರೀ ಬೋರ್ಡರ ಎಂದು ನಾವು ಬಹು ಹೆಮ್ಮೆಯಿಂದ ಸೇರಿಸಿಕೊಂಡಿದ್ದೆವು. ಅವಕ್ಕನವರ ಸೌಜನ್ಯ ಶೀಲತೆಯೇ ಕಾರಣ. B.A. ಅಭ್ಯಾಸಕ್ಕೆ ಹೈದ್ರಾಬಾದಿಗೆ ೧೯೪೦ರಲ್ಲಿ ಆಗಮಿಸಿದರು. ಅಲ್ಲೂ ಅವರದು ಅದೇ ವರ್ಚಸ್ಸು. ಕ್ಲಾಸಿನಲ್ಲಿ ಪ್ರಥಮ ಶ್ರೇಣಿಯಲ್ಲಿ ಇವರ ಗಣನೆ. ಸಮಾಜದಲ್ಲಿ ಒಳ್ಳೇ ಕಾರ್ಯಕರ್ತರೆಂದು ಭಾವನೆ. "ಆತ್ಮಾರ್ಪಣೆ" ಎಂಬ ನಾಟಕ ಬರೆದು ರೆಡ್ಡಿ ಹಾಸ್ಟೆಲ್ಲಿನ ರಂಗಭೂಮಿಯ ಮೇಲೆ ಪ್ರದರ್ಶಿಸಲಾಯಿತು. ಅವರು ಶ್ರೀ ಬಸವೇಶ್ವರರ ಪಾತ್ರ ವಹಿಸಿದ್ದರು. ನಾನು ಹರಳಯ್ಯನ ಮಗ ಶೀಲವಂತನ ಪಾತ್ರವನ್ನು, ಸೋದರರಾದ ಶ್ರೀ ಕೆ ಬಸವಣ್ಣನವರು ಅಲ್ಲಮಪ್ರಭುವಾಗಿ ಕಂಡರು. ಈ ನಾಟಕವು ಬಹು ಯಶಸ್ವಿಯಾಗಿ ಎಲ್ಲರ ಪ್ರೇಮ ಆದರಣೆ ಪಡೆಯಿತು.

ಬಿ. ಎ. ಪರೀಕ್ಷೆಯಲ್ಲಿ ಇಂಗ್ಲೀಷು ಮತ್ತು ಕನ್ನಡದಲ್ಲಿ ಉತ್ತಮ ಗುಣಗಳನ್ನು ಪಡೆದು ತೇರ್ಗಡೆ ಹೊಂದಿದರು. ಮುಂದೆ ಇವರು ಎಲ್. ಎಲ್. ಬಿ. ಪರೀಕ್ಷೆಯಲ್ಲಿ ಕುಳಿತು ನಾಪಾಸಾಗಲು ಅಭ್ಯಾಸಬಿಟ್ಟು ಸರಕಾರಿ ಸೇವೆಯಲ್ಲಿ ಸೇರಿದರು. ತಹಶೀಲದಾರರಾಗಿ ಮುಂದೆ ಏನೇನೊ ಆಗಿ ಈಗ ಆಯ್. ಎ. ಎಸ್. ಆಗಿದ್ದಾರೆ. ಅವರು ಯಾದಗಿರಿಯಲ್ಲಿ ಪ್ರಾಂತ ಆಫೀಸರರಾಗಿ, ಮಡಿಕೇರಿಯಲ್ಲಿ ಜಿಲ್ಹಾ ಅಧಿಕಾರಿಗಳಾಗಿ ಮಾಡಿದ ಕೆಲಸ ಸ್ತುತ್ಯವಾಗಿದೆ.

**ಕಾವ್ಯಾನಂದರ ಸಾಹಿತ್ಯ** – ಸಮುದ್ರವಿದ್ದಂತೆ ವಿಶಾಲ ಮತ್ತು ಆಳವಾಗಿದೆ. ಕಾವ್ಯ, ನಾಟಕ, ಕಾದಂಬರಿ, ಚರಿತ್ರೆ ಹೀಗೆ ಹಲವಾರು ವಿಧದಿಂದ ಸಾಹಿತ್ಯಸೇವೆ ಮಾಡಿದ್ದಾರೆ; ಇನ್ನೂ ಮಾಡುತ್ತಲಿದ್ದಾರೆ. ಅವರ ನಾಟಕಗಳಲ್ಲಿ; ಬಿ. ಎ.; ಬೆಳವಡಿ ಮಲ್ಲಮ್ಮ ಕಿತ್ತೂರ ಚೆನ್ನಮ್ಮ. ಆತ್ಮಾರ್ಪಣೆ; ರಜತ ರೇಖೆ ಪ್ರಸಿದ್ಧವಾಗಿವೆ. ತ್ರಿಭುವನ ಮಲ್ಲ ಮತ್ತು ಭಾರತವೀರ ಸರಕಾರದ ಪ್ರಶಸ್ತಿ ಪಡೆದಿವೆ.

ಕವನ ಸಂಕಲನಗಳಲ್ಲಿ ಜಲಪಾಶ್ರಾತ, ಕರುಣಾಶ್ರಾವಣ, ಮಾನಸ ಸರೋವರ ಮತ್ತು ಕಲ್ಲೋಲ ಮಾಲೆ ಓದುಗರು ಮೆಚ್ಚುವಂತಿವೆ.

'ಶರಣ ಚರಿತಾಮೃತ'ವು 'ಈ ಶತಮಾನದ ಮೇರುಕೃತಿ' ಎಂದು ಶ್ರೀ ಶಾಂತರಸರು ಅಭಿಪ್ರಾಯಪಟ್ಟಿದ್ದಾರೆ.

'ತುಪ್ಪಾರೊಟ್ಟಿ ಗೇ ಗೇ' ಅವರ ಇನ್ನೊಂದು ಬಾಲ ಸಾಹಿತ್ಯ ಕೇಂದ್ರ ಸರಕಾರದ ಮನ್ನಣೆ ಪಡೆದಿದೆ. 'ತುಷಾರ ಹಾರ' ಅವರ ಬಿಡಿಮುತ್ತಿನ ಹಾರ ಓದಲೇಬೇಕಾದ ಚಿಕ್ಕಕೃತಿ.

**ವ್ಯಕ್ತಿತ್ವ ಮತ್ತು ಸ್ವಭಾವ** – ಅವರ ವ್ಯಕ್ತಿತ್ವವನ್ನು ಮೇಲಿನ ಕೆಲವು ಮಾತುಗಳಿಂದ ಅಳೆಯಲು ಅಸಾಧ್ಯ. ಇದು ವ್ಯಕ್ತವಾದ ಪುರುಷ ಚರಿತೆ. ಅವ್ಯಕ್ತ ಭಂಡಾರವು ಇನ್ನೂ ಏನಿದೆ ಎಂಬುವದನ್ನು ನನ್ನಿಂದ ಅಳಿಯುವದು ಅಸಾಧ್ಯ. ಕಾಲವೇ ಅದನ್ನು ಬಹಿರಂಗಪಡಿಸಬೇಕು.



ಸ್ವಭಾವ ಬಹು ಮಧುರ. ಸುಶೀಲ ಸಂಪನ್ನರು, ವಿನಯ ಶೀಲರು, 'ಶೀಳಂಗಲ್ಲದೆ ಹಯನ ಕರೆಯುವದೆ?'– ಎಂದು ಮನಗಂಡವರು. 'ಎನಗಿಂತ ಕಿರಿಯರಿಲ್ಲ' ಎಂಬ ಭಾಷೆ, ಆಚಾರ ಅವರದು. ಅವರ ಮನೆಯಲ್ಲಿ ಕಾಲಿಡುವದೆಂದರೆ 'ಶಾಂತಿನಿಕೇತನ'ದಲ್ಲಿ ಹೋದಂತೆ. ಏನಾದರೂ ಹೊಸ ವಿಚಾರವನ್ನೆ ಹೇಳುವವರು. ನವ ಸಾಹಿತಿಗಳಿಗೆ ಪ್ರೋತ್ಸಾಹಿಸಿ ನವಕೃತಿಗಳಿಗೆ ಕಾರಣಕರ್ತರಾಗುವರು.

ಅವರ ಸೌಜನ್ಯಕ್ಕೆ ಮೆಚ್ಚದವರು ಕಹಳ ಕಡಿಮೆ. ಉಡುಪು ತೊಡವು ನಿರಾಡಂಬರ. ನಡೆ-ನುಡಿಯಲ್ಲಿ ಸರಳ ಮತ್ತು ಸಾತ್ವಿಕ. ಯಾವಾಗಲೂ ವಿಚಾರಮಗ್ನರಾಗಿರುತ್ತಾರೆ. ಮನೆಯಲ್ಲಿ ಮಕ್ಕಳ ಕೂಡ ಬಹಳ ಸಲಿಗೆಯಿಂದ ಕಾಲಕಳೆಯುವರು. ಅವರ ಬಾಳಸಂಗಾತಿ ಶ್ರೀಮತಿ ಗಿರಿಜಮ್ಮನವರು ಚರಂತಿಮಠ ಧಾರವಾಡದವರು. ಅವರ ಲಗ್ನ ಕಾಲಕ್ಕೆ ಪ್ರೊ. ಬಸವನಾಳರು ಆಶೀರ್ವದಿಸಲು ಬಂದಿದ್ದರು. ಅವರು ಅಧಿಕಾರಿಗಳಾಗಿ ಎಷ್ಟೋ ಜನರಿಗೆ ಉಪಕಾರ ಮಾಡಿದ್ದಾರೆ. ಜನಪ್ರಿಯ, ನಿಷ್ಠಾವಂತ ಅಧಿಕಾರಿಗಳೆನಿಸಿದ್ದಾರೆ.

ಅವರ ಸಮಾಜಸೇವೆ ಮತ್ತು ಸಾಹಿತ್ಯಸೇವೆ ಇನ್ನೂ ಮುಂದುವರಿಯಲಿ. ಜನರು ಮೆಚ್ಚಿ ಅವರನ್ನು ಕೊಂಡಾಡಲಿ ಎಂದು ನನ್ನ ಮಾತುಗಳನ್ನು ಮುಗಿಸುವೆ.

" ನುಡಿದರೆ ಮುತ್ತಿನ ಹಾರದಂತಿರಬೇಕು,
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು,
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,
ನುಡಿದರೆ ಲಿಂಗವು ಮೆಚ್ಚಿ ಅಹುದೆನ್ನಬೇಕು.

— ಬಸವಣ್ಣನವರು

–**'ಸತ್ಯಾನಂದ'**

# ಕರುಣಾ ಶ್ರಾವಣ

ಆಧುನಿಕ ಕನ್ನಡ ಕಾವ್ಯ ಭಾಂಡಾರವನ್ನು ಶ್ರೀಮಂತವಾಗಿಸಿದ ಕೆಲವೇ ಜನ ಕವಿಗಳಲ್ಲಿ 'ಕಾವ್ಯಾನಂದ'ರೂ ಒಬ್ಬರು. ಸಾಹಿತ್ಯದಲ್ಲಿ ಸಿದ್ಧಹಸ್ತರಾದ ಶ್ರೀ ಸಿದ್ಧಯ್ಯನವರು ಕಾವ್ಯದ ಮೇಲಿರಿಸಿದ ಅಪಾರ ಪ್ರೀತಿ-ವಿಶ್ವಾಸಗಳ ಫಲವಾಗಿ 'ಕಾವ್ಯಾನಂದ' ರೆಂಬ ಕಾವ್ಯನಾಮವನ್ನು ಧರಿಸಿದುದು ಯಥೋಚಿತವಾಗಿದೆ. ಸಾಹಿತ್ಯಶಾರದೆ ಅವರ ಮನೆಯ ಕುಲದೇವತೆ ಅವಳ ಅರ್ಚನೆ ಆರಾಧನೆಗಳೇ ನಿತ್ಯ ನೇಮಗಳು. ಆ ದೇವಿಯ ಕರುಣೆ ವಾತ್ಸಲ್ಯಗಳ ಸಲಿಲದಲ್ಲಿ ಮಿಂದ ಅವರಿಗೆ ಕಾವ್ಯಕಲೆ ಕರತಲಾಮಲಕವಾಗಿದೆ. ಅಂತೆಯೇ ಅವರ ಉಸಿರೇ ಕಾವ್ಯ ಜೀವನವೇ ಸಾಹಿತ್ಯವಾಗಿದೆ. ನಿರಂತರ ಮೂರು ದಶಕಗಳಿಂದ ನಡೆದು ಬಂದ ಈ ಆರಾಧನೆಯ ಫಲವಾಗಿ ಅವರ ಕಾವ್ಯಗಳಲ್ಲಿ ಅನುಭಾವ ಫಲವು ಮಾಗಿದೆ. ಹಿರಿಯ ಅಧಿಕಾರದ ಹೊರೆ ಹೆಗಲಿಗೇರಿದ್ದರೂ ಕಾವ್ಯಾರಾಧನೆಗೆ ಚ್ಯುತಿ ತಂದಿಲ್ಲ. ಅಧಿಕಾರ ಸ್ಥಾನ ಅವರಿಗೆ ಮುಖ್ಯವಾದುದಲ್ಲ, ಕವಿಯಾಗಿ ಬಾಳಬೇಕೆಂಬುದೇ ಅವರ ಹಿರಿಯ ಗುರಿ. ಅಂತೆಯೇ ಕರುಣಾಶ್ರಾವಣದ ಪ್ರಥಮದಲ್ಲಿ- ಸಾರುತಿದೆ ಸೃಷ್ಟಿ- ಕವಿಯಾಗು ಕವಿಯಾಗು ಎಂದು ಮನದುಂಬಿ ಹಾಡಿದ್ದಾರೆ. ಇದು ಅವರ ಹೃದ್ಗತ.

ಎಂದಾದರೊಂದು ದಿನ ಬಂದೆನ್ನ ಕಾಡದಿರು
ಇರು ನಿರಂತರವಾಗಿ ನನ್ನ ಮನದಿ
ಮೊರೆ ಚಿರಂತನವಾಗಿ ಹೃದಯವನದಿ

ಹೃದಯದಲ್ಲಿ ಚಿರಂತನವಾಗಿ ಉಳಿಯುವಂತೆ ಕವಿತೆಗೆ ಆಹ್ವಾನಿಸಿದ್ದಾರೆ. ಇದುವರೆಗೆ ಹಾಡಿದ್ದೆ ಮತ್ತಿನ್ನು ಹಾಡದಿರೆಂದುಸುರಿ

ಬಾ ಬಾಳ ದೇಗುಲಕೆ ಭಾವನರ್ತಕಿಯಾಗಿ
ಹೊಸ ಭಾವ ದೀಪಗಳ ದಿವ್ಯ ಕಾರ್ತಿಕವಾಗಿ



ಬಾ ಚಿದಾನಂದ ಕನ್ಯೆ ಮನಕೆ
ತಾ ವಸಂತವನು ಹೃದಯವನಕೆ

ಇದು ಕಾವ್ಯಾನಂದರ ಕೋರಿಕೆ. ಹಾಡಿದ್ದನ್ನೇ ಹಾಡುವ ಶುಷ್ಕ ಕವಿತಾ ರಚನೆ ಅವರಿಗೆ ಬೇಕಿಲ್ಲ. ಹೊಸ ಭಾವ ದೀಪಗಳ ದಿವ್ಯಕಾರ್ತಿಕವಾಗಿ ಹೃದಯಕ್ಕೆ ಬಾ ಎಂದು ಕವಿತೆಗೆ ಕರೆ ನೀಡಿದ್ದಾರೆ. ಕವಿತೆ ರಚಿಸುವುದು ತಿಳಿದುಕೊಂಡಷ್ಟು ಸುಲಭ ಮಾತೇನಲ್ಲ, ಕಾವ್ಯ ಸೃಷ್ಟಿಯ ಹಿನ್ನೆಲೆಯಾಗಿ ಕವಿ ಮನದಲ್ಲಿ ನಡೆಯುವ ಕುದಿತ ಕುಣಿತಗಳ ಮಿಡಕನ್ನು ಕವಿಯಾದವನೇ ಬಲ್ಲ. ಈ ಬಗೆಯ ಸವಿನೋವಿನಲಗು ಕಾವ್ಯಾನಂದರ ಎದೆಯಲ್ಲಿ ಸದಾ ಮಸೆದಾಡುತ್ತಲೇ ಇದೆ.

ಎಲೆಗೆ ಸವಿನೋವೆ, ಓ ಮಧುರ ಮರುಗೆ ಮಿಡುಕೆ ಕಳವಳವೆ
ಸ್ಥಿರವಾಗಿ ಮನೆ ಮಾಡು ಮನ್ಮನದ ಮನೆಯಲ್ಲಿ

ಈ ಸವಿನೋವೇ ಕಾವ್ಯದ ಉಗಮವೆಂಬುದನ್ನರಿತುದರಿಂದಲೇ- 'ನಿನ್ನಿಂದಲೇ ನನಗೆ ನಿರ್ಮಾಣ ಶಕ್ತಿ' ಎಂದಿದ್ದಾರೆ.

ನನ್ನ ಮನಕಂಟಿಹುದು ಪೂರ್ಣತೆಯ ಪಿಪಾಸೆ
ಎಂದಿಗಾದರು ಒಮ್ಮೆ ಅದನು ಪಡೆವಾಸೆ
ಅದನು ಪಡೆಯುವ ತನಕ ನೀನಿಂತೆ ಕೊರೆಯುತಿರು
ಅದುವರೆಗೆ ಜೊತೆಯಾಗು ಕೊಡು ನನಗೆ ಭಾಷೆ

ಎಂದು ಸವಿನೋವಿನಿಂದ ಭಾಷೆ ಪಡೆಯುವ ಆಸೆ ಇವರಿಗೆ. ಕಾವ್ಯ ಸಿದ್ಧಿಯ ತಪಸ್ಸಿನಲ್ಲಿ ಸವಿನೋವು ದಿವ್ಯಸಾಧನೆ. ಈ ಸಾಧನೆಯ ಬಲದಿಂದಲೇ ಪೂರ್ಣತೆಯನ್ನು ಪಡೆಯುವ ಹಂಬಲ ಕವಿಗೆ. ಈ ದಿಸೆಯಲ್ಲಿ ಸಾಗಿದಾಗ ನೋವು-ನಲಿವುಗಳೆರಡೂ ಸಮಾನವಾದವುಗಳು.

ಅಂತೆಯೆ,

ಚಿತ್ರ ಚಿತ್ರಾಕ್ಷರದಿ ಬರೆಯಬಹುದಿನ್ನೊಮ್ಮೆ
ಚೆಲುವೆ ಬರೆಹದ ಬಳ್ಳಿಯಾಗಿ ಹಬ್ಬಿ

ಎಂದಾಡಿದ ಕವಿ

ನೂರು ನೋವಿನ ಮುಳ್ಳ ಲೆಕ್ಕಣಿಕೆಯಿಂದಲೇ
ಬರೆಯಬಹುದೊಮ್ಮೊಮ್ಮೆ ಅಮಲ ಹಾಡಿ

ಹೀಗೆಯೂ ಹಾಡಿದ್ದಾರೆ. ಆನಂದ ರಸದೃಷ್ಟಿ ಕಾವ್ಯ ಸೃಷ್ಟಿಗೆ ಸಾಧನವಾಗುವಂತೆ ದುಃಖ-ದುಮ್ಮಾನಗಳೂ ಕವಿತಾರಚನೆಗೆ ಪ್ರೇರಣೆ ನೀಡುತ್ತವೆ ಎಂಬ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ಒಮ್ಮೆ ಅಮೃತವ, ಒಮ್ಮೆ ವಿಷದಿ ಗಲಗು ಅದ್ದಿ ಬರೆಯಬಹುದೆಂಬುದನ್ನು ಸಾರಿದ್ದಾರೆ.

ಕಾವ್ಯ ಎಂತಿರಬೇಕು? ಅದು ಜನರ ಆಸೆ-ಅಭಿರುಚಿಗಳನ್ನು ಪೂರೈಸಬೇಕೆ? ಎಂಬ ಪ್ರಶ್ನೆಗೆ

ಮುಡಿವವರ ಮುಖ ನೋಡಿ ಅರಳುವುವೆ ಪುಷ್ಪಗಳು
ಓದುಗರ ಆಸೆಯಲಿ ನೀ ಬರೆಯ ಬೇಡ
ನಿನ್ನರುಚಿಯೆತ್ತರಕೆ ಓದುಗರೆ ಬರಬೇಕು
ಅವರನೊಲಿಸಲು ನಿನ್ನ ಗುರಿ ತೊರೆಯ ಬೇಡ

ಎಂದು ಸ್ಪಷ್ಟವಾಗಿ ಉತ್ತರ ನೀಡಿದ್ದಾರೆ. ಜನರ ಅಭಿರುಚಿ ಆಶೆ ಅಕಾಂಕ್ಷೆಗಳನನುಲಕ್ಷಿಸಿ ನೀ ಕೆಳಗಿಳಿದು ಕಾವ್ಯರಚಿಸುವ ಗೋಜಿಗೆ ಹೋಗಬೇಡ, ನಿನ್ನ ಅಭಿರುಚಿ ಅಭಿಲಾಷೆಗಳಿಗೆ ತಕ್ಕಂತೆ ಕವನ ಸೃಜಿಸು. ನಿನ್ನ ಕಾವ್ಯ ಸತ್ವದ ಎತ್ತರಕೆ ಜನರೇ ಬರಬೇಕು. ಧಿಕ್ಕಾರವೆ ಸಿಗಲಿ, ಸತ್ಕಾರವೆ ಬರಲಿ ನಿನ್ನ ಪಾಲಿಗೆ ಬಂದುದನ್ನೇ ನೀನು ಬರೆ ಎಂದು ಮಾರ್ಗದರ್ಶನ ಮಾಡಿದ್ದಾರೆ.

ಕಲ್ಪನಾ ವಿಲಾಸದಿಂದ ಕವಿಗಳು–

ತಾರೆಗಳ ನೆರಳ ನುಲಿ ಹಿಡಿದು ಮೇಲೇರಿದರು
ರೆಕ್ಕೆಯಿಲ್ಲದೆ ಅಂತರಿಕ್ಷಕ್ಕೆ ಹಾರಿದರು
ಶೋಕವನೆ ನಗಿಸಿದರು ಮೂಕತೆಯ ನುಡಿಸಿದರು
ನಾಕವನು ನರಕದಲೆ ಮೂಡಿಸಿದರು



ಎಂದು ಹೇಳಿ ಕಲ್ಪನಾ ವಿಲಾಸದ ವೈಖರಿಯನ್ನೂ ವೈಭವವನ್ನೂ ತೋರಿದ್ದಾರಲ್ಲದೆ, ನಮ್ಮನ್ನೂ ಆ ಲೋಕದಲ್ಲಿ ಕರೆದೊಯ್ದು ತೂಗುಯ್ಯಾಲೆಯನ್ನಾಡಿಸಿದ್ದಾರೆ.

ಇನ್ನು ಇವರ ಭಾವ ಸುಂದರಿಯ ಬೆಡಗನ್ನು ನೋಡಿ–

ಕೇದಗಿಯ ರಸದಲ್ಲಿ ಕೇಶರದ ಹುಡಿಗಲಿಸಿ
ಮಾಡಿರುವ ಮುದ್ದಾದ ಕನ್ನೆ
ಅರುಣರಾಗವ ಕುಸುಮ ರಸಗೊಪಿನೊಳು ತೆಯ್ದು
ಆಗಿವೆಯೆ ನಿನ್ನ ಕೆನ್ನೆ

ಈ ಕಾವ್ಯ ಬ್ರಹ್ಮನ ಸೃಷ್ಟಿ ಯಾವ ಬ್ರಹ್ಮನಿಗೆ ಸಾಧ್ಯ !

ಹಾಲಿನಾ ಹೊಳೆಯಲ್ಲಿ ಚೆಂದಿರನ ಪಡಿನೆಳಲು
ಮೂಡಿರುವ ತೆರದಿವಳ ಮೊಗವು
ಹೂವು ಬಾಯ್ದೆರೆದಂತೆ ಹಸು ಹಾಲುಕರೆದಂತೆ
ಮುತ್ತುಗಳು ಸುರಿದಂತೆ ನಗೆಯು

ಹೀಗೆ ಭಾವ ಸುಂದರಿಯ ಕೋಮಲ ಅಂಗಾಂಗಗಳನ್ನು ಸರಿಯಾದ ಉಪಮೆಗಳಿಂದ ಬಣ್ಣಿಸಿದ್ದಾರೆ. ಚೆಲುವು ನೆಲೆಸಿಹ ಗೆಲುವುಗಂಬದಂತಿರುವ ತಾಜಮಹಲದ ಸೌಂದರ್ಯವನ್ನು ಕಂಡ ಕವಿ ಭಾವ ವಿಹಂಗಮ ಗರಿಗೆದರಿ ಹಾರುತ್ತದೆ

ಸುಕುಮಾರ ಸೌಧವಿದ ಸೂರ್ಯನೂ ನಯಭಯದಿ
ಮುತ್ತಿಡುವ ಮೋಡಗಳ ಮರೆಯಲ್ಲಿ ಬಂದು

ಈ ಸುಕುಮಾರ ಸೌಧಕ್ಕೆ ಬಹಿರಂಗವಾಗಿ ಮುತ್ತಿಡಲು ಸೂರ್ಯನಿಗೂ ನಾಚಿಕೆಯೇನೋ ! ಅಂತೆಯೆ ಮೋಡಗಳ ಮರೆಯಲ್ಲಿ ಬಂದು ಮುತ್ತಿಡುವನಂತೆ !

ಇಲ್ಲಿಂದಲೇ ಚಂದ್ರ ಪಡೆವನೇನೋ ತನಗೆ
ಕೊರತೆಯಾದಾಗೊಮ್ಮೆ ಸಹಜ ಶಾಂತಿ

ಶಾಂತಿಗೆ ಹೆಸರಾದ ಚಂದ್ರ ಅವರ ಕೊರತೆಯಾದಾಗ ಈ ಸೌಧ ದಿಂದಲೇ ಆ ಸಹಜ ಶಾಂತಿಯನ್ನು ಪಡೆಯುವನಂತೆ ! ಇಂತಹ ಸೊಬಗಿನ ಶಾಂತಿಯ ರಾಶಿಯಲ್ಲಿ ಮಲಗಿರುವ ಪ್ರೇಮಜೀವಿಗಳಾದ ಷಾಜಹಾನ್ ಮುಮತಾಜರ ಸೌಭಾಗ್ಯ ಯಾರಿಗಿವೆ? ಎಂದು ಕೇಳಿದ ಕವಿ.

ಪ್ರೇಮವಿರೆ ಗುಡಿಸಲೇ ತಾಜಮಹಲಾಗುವದು
ಇಲ್ಲದಿರೆ ಅರಮನೆಯು ಸೆರೆಮನೆಗೆ ಸರಿಯು

ಎಂಬ ತತ್ವವನ್ನು ಸಾರಿಹೇಳಿದ್ದಾರೆ. ಕಾವ್ಯಾನಂದರ ಕಾವ್ಯಗಳಲ್ಲಿ ಸೌಂದರ್ಯ ರಶ್ಮಿಯ ಮಿಂಚು ಕೋರೈಸಿದೆ. ಸೊಬಗಿನ ಸುಗ್ಗಿ ಸೆರೆಸೂರೆ ಯಾಗಿದೆ.

ಈ ಸೊಬಗ ಹಿಗ್ಗುಗಳ ಹರಿವ ಸುರನದಿಯಲ್ಲಿ
ನಿನ್ನ ನಾನಾ ದುಃಖ ಕ್ಲೇಶ ಚಿಂತೆಯ ಚೆಲ್ಲಿ
ಹಿಗ್ಗು ಹಿಗ್ಗೆಲೆ ಜೀವ ಹಿಗ್ಗಲಿಕೆ ತಡೆಯೆಲ್ಲಿ ?

ಈ ಸೊಬಗೆಲ್ಲವೂ ಆ ದೇವನ ಲೀಲೆ ಎಂದರಿತಾಗ ವ್ಯರ್ಥವಾಗಿ ದುಃಖಕೆಡೆಗೊಡುವುದೇಕೆ ? ಈ ಸೊಬಗಿನ ಸಿರಿಯಲ್ಲಿ ನಿನ್ನೆಲ್ಲ ವ್ಯಥೆ ಯನ್ನು ಚೆಲ್ಲಿ ಆನಂದಿಸು ಎನ್ನುವ ಅವರ ನುಡಿ ಗಮನಿಸಬೇಕಾದುದು. ದೇವನೊಬ್ಬ ಕಲೆಗಾರ, ವಿಶ್ವವೇ ಅವನ ಸಾಹಿತ್ಯ. ನಾವೆಲ್ಲ ಅವನ ಕುಶಲ ಕಲೆಯ ಮೂರ್ತಿಗಳು ಎಂಬ ಮಾರ್ಮಿಕ ಪಂಕ್ತಿಗಳನ್ನು ನೋಡಿ.

ಕಾಲ ಕಂಬದ ಮೇಲೆ ಉಡಿಯ ಬೋದುಗೆಯಿರಿಸಿ
ಮೆಲೆ ಮುಂಡದ ಭವ್ಯ ಗೋಪುರವ ನಿಲಿಸಿ
ಇಕ್ಕೆಲದಿ ಬಾಹುಗಳ ಬೊಂಬೆಗಳ ಸಿಂಗರಸಿ
ಮೇಲೆ ರುಂಡದ ರತ್ನ ಕಲಶವನು ಮೆರಿಸಿ
ಲೀಲೆಯಲಿ ಪ್ರಾಣದೇವನ ದಿವ್ಯ ದೇಗುಲವ
ದಿನ ದಿನವು ಕಟ್ಟುವನು ಕುಶಲ ಕಲೆಗಾರ



ಈ ಕಲೆಗಾರನ ಕಾವ್ಯಸೃಷ್ಟಿ ಎಂತಹದು!

ನೆಲವ ಕಾಗದ ಮಾಡಿ ಜಲವ ಮಸಿಯನು ಮಾಡಿ
ಸುಳಿದು ಬೀಸುವ ಗಾಳಿಯನೆ ಭಾವ ಮಾಡಿ
...............................................
ಸಲೆ ಸೃಷ್ಟಿ ಕಾವ್ಯವನು ಬರೆಯುತಿಹ ಕಲೆಗಾರ

ಸೌಂದರ್ಯ ದೃಷ್ಟಿ ಶಿವಭಾವದೆಡೆ ತಿರುಗಿದಾಗ ಅನಂತತೆಯ ಅರಿವು ಮೂಡಿ ಅಂತರಾತ್ಮನಿಗಾಗಿ ಕಾತರಿಸಿದ್ದಾರೆ.

ಇನ್ನಾದರು ಪ್ರಕಟವಾಗೊ
ಓ ಸರ್ವೋತ್ತಮ
ನರನ ಮರೆಯ ನರೋತ್ತಮ
ಓ ಅಂತರಾತುಮ

ಕಾತರ ಭಾವ ಹೆಚ್ಚಿ ಮೊರೆ ಇಟ್ಟಿದ್ದಾರೆ ಅಂತರಾತ್ಮನಲ್ಲಿ

ಏಸು ಸಲ ಬರಿದೆ ಸತ್ತು
ಹುಟ್ಟಿ ಮತ್ತೆ ಸಾಯಲಿ?
ಹಿಂದೆ ನೊಂದ ನೋವಿನಲ್ಲೆ
ಇಂದು ಮತ್ತೆ ನೋಯಲಿ?
ಎಷ್ಟು ಜನ್ಮ ಹೀಗೆ ನಿನ್ನ
ಬರುವಿಗಾಗಿ ಕಾಯಲಿ?

ಜನ್ಮಾಂತರಗಳ ತಿರುಗಣಿಯ ಮಡುವಿನಲ್ಲಿ ಸಿಕ್ಕು ಒದ್ದಾಡುತ್ತಿದ್ದ ನಾನು ನಿನ್ನ ಆಗಮನವನ್ನು ನಿರೀಕ್ಷಿಸುತ್ತ ಎಷ್ಟು ಜನ್ಮಗಳನ್ನು ಹೀಗೆಯೇ ಕಳೆಯಬೇಕು? ಎಂದು ದೀನ ಭಾವದಿಂದ ಪ್ರಾರ್ಥಿಸಿದ್ದಾರೆ.

ನಾವೆಲ್ಲರೂ ಬಾಳಿನ ಪಥಿಕರು. ನಮ್ಮ ಮುಂದಿನ ದಾರಿ ಅನಂತ ಅಗಮ್ಯ. ಇದಕ್ಕೆ ಕೊನೆಯೆಲ್ಲಿ? ಎಂಬ ಸಂದೇಹ ಇವರನ್ನೂ ಬಿಟ್ಟಿಲ್ಲ.

ಗುರುಯಿದೆಯೆ ಪಯಣಕ್ಕೆ ಕೊನೆಯಿದೆಯೆ ಪಥವಿದಕೆ?
ಹೋಗಿ ತಂದವರಾರು ಇದರ ಸುದ್ದಿ

ಎಂಬ ಶಂಕೆ ಸಂದೇಹಗಳ ಮಧ್ಯದಲ್ಲಿ ಯಾವ ಬೆಳಕೋ ದಾರಿ ತೋರಿತು ಎಂಬ ಆಶಾಕಿರಣ ಮೂಡದೆ ಇಲ್ಲ. ಆದರೆ ಈ ಬೆಳಕು ಬೇರೆಡೆಯಿಲ್ಲ.

ನಿನಗೆ ನೀನೇ ಬೆಳಕು ನಿನಗೆ ನೀನೇ ಬೆಳಕು
ನಿನ್ನ ದಾರಿಯ ನೀನೆ ಹುಡುಕಿಕೋ ಪಥಿಕ

ಕವಿಗೆ ಅನುಭಾವ ದೃಷ್ಟಿ ಮೂಡಿದಾಗ ಅವನ ಕಾವ್ಯ ಕಲ್ಪವೃಕ್ಷವಾಗುತ್ತದೆ ಎಂಬ ಮಾತು ಸತ್ಯ. ಕವಿಯ ಭಾವವಿಲ್ಲಿ ಚಿನ್ಮಯದಿಂದ ಚಿದಾನಂದಮಯದತ್ತ ಸಾಗಿದೆ.

ನೀರಲ್ಲವಿದು ತೀರ್ಥ ವಿಶ್ವ ಲಿಂಗೋದಕವು
ಆಗಲಿನ್ನಾದರೂ ಈ ಲೋಕ ನಾಕ

ಎನ್ನುವ ನುಡಿಯೇ ಇದಕ್ಕೆ ನಿದರ್ಶನ. ಮಳೆಯನ್ನು ವಿಶ್ವಲಿಂಗೋದಕವಾಗಿ ಕಂಡ ಕವಿಯ ದೃಷ್ಟಿ ಅಂತರ್ಮುಖವಾಗಿದೆ. ಕಾಶ್ಮೀರದಲ್ಲಿ ಕಾರ್ಗಾಲವನ್ನು ಬಣ್ಣಿಸುತ್ತ-

ಗಜ ಚರ್ಮಮೇಘ ಭಸಿತಾಂಗ ಹಿಮವು ಗಂಗೋತ್ತಮಾಂಗ ಶೃಂಗ
ಈ ಬೆಟ್ಟರುದ್ರ ಶ್ರೀನಗರ ಗೌರಿ ರಮಣೀಯ ಉಭಯ ಸಂಗ

ಈ ರೀತಿ ಎಲ್ಲೆಡೆಯಲ್ಲಿಯೂ ಶಿವನ ಛಾಯೆಯನ್ನೇ ಕಂಡಿದ್ದಾರೆ. ಬಣ್ಣಬಣ್ಣದ ಬಣ್ಣನೆಯಲ್ಲಿ ಚಿದಾನಂದನ ಚಿತ್ರವೇ ಮೂರ್ತೀಭವಿಸುತ್ತದೆ.

'ಕರುಣಾಶ್ರಾವಣ'ದ ಜನನಕ್ಕೆ ಭೂಮಿ-ವ್ಯೋಮಗಳೆರಡರಲ್ಲಿ ಮಧುರ ಮಿಲನವಾಗುವ ದೃಶ್ಯ ನೋಡಿ,



ಭೂಮಿಗೆ-ವ್ಯೋಮಕೆ ಪಾಣಿಗ್ರಹಣ
ಮೋಡದ ಚಪ್ಪರ ಮಿಂಚಿನ ತೋರಣ
ಆಲಿಯ ಅಕ್ಷತೆ ಗಿರಿ ದರಿ ಗಾಯನ
ಸಿಡಿಲ ಪಟಾಕಿಯು ದಿಸೆಗಳ ನರ್ತನ
ಕರುಣಾಶ್ರಾವಣ ಶುಭ ಸಂತಾನ

ಈ ತೆರನಾಗಿ ಕರುಣಾಶ್ರಾವಣದ ತುಂಬೆಲ್ಲ ಚೆಲ್ಲುವರಿದ ಸೌಂದರ್ಯ ರಾಶಿಯಲ್ಲಿ ಶಿವಭಾವದ ದಿವ್ಯಪ್ರಕಾಶ ಬೆರೆತುಕೊಂಡಿದೆ

ಭಾವ-ಭಾಷೆಗಳ ಸುಮಧುರ ಸಾಮರಸ್ಯವು ಕಾವ್ಯಾನಂದರ ಕಾವ್ಯಕ್ಕಿರುವ ವೈಶಿಷ್ಟ್ಯ. ಎರಡೂ ಚಿತ್ತದ ಬಾನೆತ್ತರದಲಿ ಜೊತೆಗೂಡಿ ಹಾರುವ ವಿಹಂಗಮಗಳು. ರಸಭಾವ ಕ್ಷೀರದಲಿ ಉಚಿತ ಪದ ಸಕ್ಕರೆವೆರಸಿದಂತಿರುವ ಕಾವ್ಯಗಳು ರಸಿಕರ ಮನ ತಣಿಸುತ್ತಿವೆ. ಸರಸ ಪ್ರಾಸೋಕ್ತಿಗಳ ಪಂಕ್ತಿಯಲಿ-ರಸಭಾವವೊಸರುವುದನ್ನು ನೋಡಿ,

ನೆರೆಬಂತು ತೊರೆಗೆ ನೊರೆಬಂತು ತೆರೆಗೆ ಹರೆಬಂತು ದರಿಯ ಝರಿಗೆ
ಮದಬಂತು ವನಕೆ ಮುದಬಂತು ಜನಕೆ ನಿಧಿಬಂತು ಗದ್ದೆ ಕೆರೆಗೆ

ಕಾವ್ಯಾನಂದರ ಕಾವ್ಯವಾಣಿ ಶ್ರೀಮಂತವಾಗಿದೆ. ಪ್ರಾಸಕ್ಕಾಗಿ ಪದಗಳನ್ನೆಳೆದು ತರುವ ಮನೋಭಾವ ಇವರದಲ್ಲ. ವಾಣಿ ವೀಣೆ ನುಡಿಸಿದಂತೆ ಇವರ ಕಾವ್ಯರಾಣಿ ಕಣ್ಬಣೆಯೆ ಕುಣಿದಿದ್ದಾಳೆ. ಆದುದರಿಂದ ತಾಳಲಯ-ಗತಿಗಳಿಗಿನ್ನೆಲ್ಲಿ ಕುಂದು? ಸಹಜತೆ, ಸರಲತೆ, ಸ್ಪಷ್ಟತೆ, ಕೋಮಲತೆ ಕಾವ್ಯದುದ್ದಕ್ಕೂ ಹರಿದು ಬಂದಿವೆ. ಚಮತ್ಕಾರ ಕೋರೈಸುವ ತಿಳಿನುಡಿಗಳಿಗೂ ಕೊರತೆಯಿಲ್ಲ. 'ಕೊಡುವವರಿಗಿರಬಹುದೆ ಕಡೆತನಕ ಬಡತನವು?' 'ದುಃಖದ ಉರದಿಂ ಸುಖದ ಸಮೀರಣ' 'ತಾಜಮಹಲನು ನೋಡಿ ರಾಜ ವೈಭವ ಬಯಸಬೇಡ' 'ಒಳಗಿರುವ ಬೆಳಕನ್ನೇ ಕೇಳಿ ಮುಂದಕೆ ಸಾಗು' 'ನಿನ್ನೊಡನೆ ಹೊರಡುವದು ನಿನ್ನ ತನವೊಂದೆ' 'ಕವಿಯ ಜೀವನವೊಂದು ಸಂತಾಪ ಸ್ತೂಪ' 'ಶಕ್ತಿ ಸಂಪಾದಿಸಿರಿ ನ್ಯಾಯಕಾಗಿ' 'ಆಸೆಯೆ ಹಗಲು, ನಿರಾಸೆ ರಾತ್ರಿ'

ಈ ಬಗೆಯ ಅನೇಕ ಹಿತನುಡಿಗಳನ್ನು ಅಲ್ಲಲ್ಲಿಗೆ ಕಾಣುತ್ತೇವೆ.

"ಕಾವ್ಯಾನಂದರ ಹೃದಯದಲ್ಲಿ ಶಿವಕಾರುಣ್ಯದ ಸೆಲೆಯಿರುವದರಿಂದ ಅವರಿಂದ ಅನೇಕ ಕೃತಿಗಳು ಹೊರಬರುತ್ತಲೇ ಇರುತ್ತವೆ." ಎಂದು ಹಿರಿಯ ಕವಿಗಳೊಬ್ಬರಾದ ಶ್ರೀ ಪು. ತಿ. ನರಸಿಂಹಾಚಾರ್ಯರು ಹೇಳಿರುವುದನ್ನು ಸ್ಮರಿಸಿಕೊಳ್ಳಬಹುದು. ಇವರ ನಿರ್ಮಲ ಹೃದಯದಿಂದಿಳಿತಂದ ಕಾವ್ಯ ಗಂಗೆಯಲಿ ಮಿಂದು ಪುನೀತರಾಗುವ ರಸಿಕರೇ ಧನ್ಯರು.

ಕಾವ್ಯಾನಂದರು ಇದುವರೆಗೆ ಆರೇಳು ಕವಿತಾ ಸಂಕಲನಗಳನ್ನು ಪ್ರಕಟಿಸಿದ್ದರೂ ನಾನು ಈ ಕರುಣಾಶ್ರಾವಣವನ್ನೇ ಏಕೆ ಆಯ್ದುಕೊಂಡೆ? ಎಂಬ ಪ್ರಶ್ನೆ ಏಳುವುದು ಸಹಜ. ಒಂಬತ್ತು ವರ್ಷಗಳಾಚೆ ಬೆಂಗಳೂರಿಗೆ ಹೋದಾಗ ಅವರ ದರ್ಶನದ ದಿವ್ಯ ಲಾಭ ನನಗೊದಗಿತಲ್ಲದೆ, ಅಲ್ಲಿದ್ದ ಆರು ವಾರಗಳ ಕಾಲಾವಧಿಯಲ್ಲಿ ಅವರ ಕಾವ್ಯಾಸ್ವಾದನೆಯನ್ನು ಸವಿಯುವ ಸದವಕಾಶ ನನಗೊದಗಿತು. ನಿಸರ್ಗ ರಮಣೀಯವಾದ ನಂದಿ ಬೆಟ್ಟದಲ್ಲಿ ಅವರೊಡನೆ ಕೂಡಿ ಕಳೆದ ದಿನದ ನೆನಪು ಇನ್ನೂ ಹಸರಾಗಿಯೇ ಇದೆ. ಆಗ ಅವರಿಂದ ಪಡೆದ 'ಕರುಣಾಶ್ರಾವಣ' ನನ್ನ ಹೃದಯವನ್ನು ಸೂರೆಗೊಂಡಿತು. ಅಂದಿನಿಂದ ಇಂದಿನವರೆಗೆ ಆಗಾಗ ಅದನ್ನೋದಿ ಆನಂದಿಸುತ್ತಿದ್ದ ನಾನು ಆ ಅದಮ್ಯ ಆನಂದವನ್ನು ಹೊರಸೂಸಲು ಈ ಲೇಖನ ಬರೆಯಬೇಕಾಯಿತು.

ನಾಡ ನುಡಿಗೆ ಕಾವ್ಯಾನಂದರಿತ್ತ ಕೊಡುಗೆ ಅನುಪಮ. ಕೀರ್ತಿಶನಿಯಿಂದ ದೂರವಿದ್ದು, ಯಾವ ಪ್ರತಿಫಲಾಪೇಕ್ಷೆಯಿಲ್ಲದೆ ಮೂರುದಶಕಗಳ ಕಾಲ ನಿರಂತರ ಸೇವೆಸಲ್ಲಿಸಿದ ಕಾವ್ಯಾನಂದರಿಗೆ ನಾಡ ಜನತೆ ಋಣಿಯಾಗಿದೆ. ಇಂತಹ ಕವಿಯನ್ನು ಗೌರವಿಸುವದಕ್ಕಿಂತ ಹಿರಿದಾದ ಭಾಗ್ಯ ಮತ್ತಾವುದಿದೆ?

ಶಂ. ಗು. ಬಿರಾದಾರ

# ಕಾವ್ಯಾನಂದರ ಕಲ್ಲೋಲಮಾಲೆ

೧೯೬೩ರ ಜೂನ ತಿಂಗಳ ಒಂದು ದಿನ. ನನಗೆ ಏಕಕಾಲಕ್ಕೆ ಆಶ್ಚರ್ಯ-ಆನಂದಗಳನ್ನುಂಟುಮಾಡುವ ವಾರ್ತೆಯೊಂದು ಬಂತು- ಮೈಸೂರು ರಾಜ್ಯ ಸರಕಾರದ ವಾರ್ತಾ ಇಲಾಖೆಯಲ್ಲಿ 'ಪಂಚಾಯತ ರಾಜ್ಯ' ಪತ್ರಿಕೆಯ ಸಹ ಸಂಪಾದಕನಾಗಿ ಕೆಲಸ ಮಾಡಲು ನನ್ನನ್ನು ವರ್ಗಾಯಿಸಿದ ವಾರ್ತೆ! ಬೆಳಗಾಂವಿ ಜಿಲ್ಲೆಯ ಬರಡು ಸೀಮೆಗಳಲ್ಲೊಂದಾದ ರಾಯಬಾಗದಿಂದ-ಲಾಲಬಾಗದ ಹಸಿರು ಸೀಮೆಗೆ ಹೊರಡಲು ಕರೆ ಬಂದುದು ನನಗೆ ಆಶ್ಚರ್ಯವನ್ನುಂಟುಮಾಡಿದ್ದರೆ ಆ ವಾರ್ತೆಯಿಂದ ನನಗೆ ವಿಶೇಷ ಆನಂದವುಂಟಾಗಲು ಬೇರೆಯೇ ಒಂದು ಕಾರಣವಿತ್ತು. ನನ್ನ ವರ್ಗಾವಣೆಯ ಆಜ್ಞೆ ಬಂದ ಒಂದೆರಡು ವಾರಗಳ ಹಿಂದೆಯಷ್ಟೇ ವಾರ್ತಾ ಇಲಾಖೆಯ ಮುಖ್ಯಾಧಿಕಾರಿಗಳಾಗಿ ಅಧಿಕಾರ ವಹಿಸಿಕೊಂಡಿದ್ದರು ಕನ್ನಡದ ಕವಿ 'ಕಾವ್ಯಾನಂದ' ಶ್ರೀ ಸಿದ್ಧಯ್ಯ ಪುರಾಣಿಕ ಅವರು. ಮೊದಲಿನಿಂದ ಬೆಂಗಳೂರಿಗೆ ಹೋದಾಗಲೆಲ್ಲ ಅವರನ್ನು ಕಂಡು ಮಾತಾಡಿಸಿ ಬರುವದು ನನಗೆ ಅತಿ ಪ್ರಿಯವಾದ ಕೆಲಸವಾಗಿತ್ತು. ಈಗ ಅವರ ಜೊತೆಗೇ ಕೆಲಸ ಮಾಡುವ ಯೋಗ ಒದಗಿ ಬಂದುದಕ್ಕೆ ನನಗೆಷ್ಟು ಆನಂದವಾಗಿರಲಿಕ್ಕಿಲ್ಲ? ೧೯೫೮ರಲ್ಲಿ ಶಮನೇವಾಡಿಯಲ್ಲಿ ಹೈಸ್ಕೂಲ ಶಿಕ್ಷಕನಾಗಿದ್ದಾಗ ವಿದ್ಯಾರ್ಥಿಗಳಿಗೆ ಶ್ರೀ ಕಾವ್ಯಾನಂದರ 'ಕಾಶ್ಮೀರದಲ್ಲಿ ಕಾರ್ಗಾಲ' ಕಲಿಸುತ್ತಿರುವಾಗ ಕವಿಯ ಬಗೆಗೆ ನನ್ನಲ್ಲಿ ಮೂಡಿಕೊಂಡ ಆದರಾಭಿಮಾನಗಳಿಗೆ ಈಗ ಹೊಸ ಕೋಡು ಮೂಡಿದಂತಿತ್ತು!

ಬೆಳಗಾಂವಿಯಿಂದ ಪ್ರಯಾಣ ಬೆಳೆಸಿ ಬೆಂಗಳೂರು ಸೇರಿದೆ. ವಾರ್ತಾ ಇಲಾಖೆಯ ಮುಖ್ಯಾಧಿಕಾರಿಗಳ ಕೋಣೆಯಲ್ಲಿ ಕಾಲಿಡುವಾಗ 'ನಾನು ಅವರಕೈಯಲ್ಲಿ ಕೆಲಸ ಮಾಡಲು ನಡೆಸವ' ಎಂಬ ಎಚ್ಚರಿಕೆ ನನಗಿತ್ತು. ಆದರೆ ನಾನು ಒಳಹೋಗಿ ನಮಸ್ಕಾರ ಮಾಡುತ್ತಲೇ ತಮ್ಮ ಮೊದಲಿನ ಸ್ನೇಹಭಾವದಿಂದಲೇ ನನ್ನ ಕೈಕುಲುಕಿ ಬರಮಾಡಿಕೊಂಡರು. ಏನು-ಎಷ್ಟು ಮಾತಾಡಬಹುದಿತ್ತೋ ಅಷ್ಟನ್ನು ಮಾತಾಡಿ ನಾನು ಎದ್ದು

ಹೊರಡುವ ಮುನ್ನ ಅವರಿಗೆಂದೆ "ಅಂತೂ ನಿಮ್ಮ ಕೈಯಲ್ಲಿ ದುಡಿಯುವ ಯೋಗ ನನಗೆ ಒದಗಿದೆ. ನನ್ನನ್ನು ಸರಿಯಾಗಿ ದುಡಿಸಿಕೊಳ್ಳಿ." ಮುಗುಳು ನಗುತ್ತ ಅವರೆಂದರು; "ದುಡಿಸಿಕೊಳ್ಳೋದೇನು ಬಂತು ? ನಾವೂ ನೀವೂ ಕೂಡಿ ದುಡಿಯೋಣ! "

ಹಾಗೆ ಎರಡು ವರ್ಷಗಳ ಕಾಲ ಕೂಡಿ ದುಡಿಯುವ ಯೋಗ ನಮ್ಮದಾಗಿತ್ತು. ಆ ಯೋಗದ ಆರಂಭವೆನಿತು ಆನಂದಮಯವಾಗಿತ್ತೋ ಅಷ್ಟೇ ಮಧುರವಾಗಿತ್ತು ಅದರ ಮುಕ್ತಾಯ. ಸಿದ್ಧಯ್ಯ ಪುರಾಣಿಕರ ಪುಣ್ಯ ಹಸ್ತ-ದಿಂದ ದಾಟಿ ನನ್ನ ಬಿನ್ನಹ ಪತ್ರವೊಂದು ಭಾರತ ಸರಕಾರದ ವಾರ್ತಾ ಮತ್ತು ಪ್ರಸಾರ ಇಲಾಖೆಗೆ ಹೋಗಿತ್ತು. ಕೇಂದ್ರ ಸರಕಾರದ ವಾರ್ತಾ ಪ್ರಚಾರಾಧಿಕಾರಿಯಾಗಿ ನನ್ನ ಆಯ್ಕೆಯಾದ ವಾರ್ತೆಯನ್ನು ದೆಹಲಿಯಿಂದ ತಂದು ನನಗೆ ತಿಳಿಸಿದವರೂ ಅವರೇ! ೧೯೬೪ರ ಜೂನದಲ್ಲಿ ಹೊಸ ಕೆಲಸಕ್ಕೆ ಕಾಲಿಡುವ ಮಾನಸಿಕ ಸ್ಥಿತಿಯಲ್ಲಿ ನಾನಿದ್ದಾಗಲೇ ಶ್ರೀ ಸಿದ್ಧಯ್ಯನವರನ್ನು ವಾರ್ತಾ ಇಲಾಖೆಯಿಂದ ಹಣಕಾಸಿನ ಇಲಾಖೆಗೆ ವರ್ಗಾಯಿಸಿದ ಆಜ್ಞೆ ಬಂತು. ನಾನು ವಾರ್ತಾ ಇಲಾಖೆಯಲ್ಲಿ ಸೇರಿಕೊಳ್ಳುವ ಒಂದೆರಡು ವಾರಗಳ ಹಿಂದೆಯಷ್ಟೆ ಅದರ ಮುಖ್ಯಾಧಿಕಾರಿಗಳಾಗಿ ಅಧಿಕಾರ ವಹಿಸಿಕೊಂಡಿದ್ದ ಶ್ರೀ ಪುರಾಣಿಕ ಅವರು ಹಣಕಾಸಿನ ಇಲಾಖೆಯ ಹೊಸ ಹುದ್ದೆಯೊಂದಕ್ಕೆ ನಿಯೋಜಿತರಾದ ಒಂದೆರಡು ವಾರಗಳಲ್ಲಿಯೇ ನಾನು ಬೆಂಗಳೂರ ಬಿಡುವ ಸಂದರ್ಭ ಬಂದುದು ಒಂದು ಯೋಗಾಯೋಗವೇ! ಅಲ್ಲದಿನ್ನೇನು? "ನಾವೂ ನೀವೂ ಕೂಡಿ ದುಡಿಯೋಣ" ಎಂದಿದ್ದ ಅವರ ಆತ್ಮೀಯ ನುಡಿಯ ಬೆಲೆ ಅಂದು ನನಗೆ ಮನದಟ್ಟಾಯಿತು. ೧೯೬೨ರಿಂದ ೧೯೬೪ರ ವರೆಗೂ ಚೀಣಾ ದುರಾಕ್ರಮಣದ ಕಾಲದಲ್ಲಿ ವಾರ್ತಾ ಇಲಾಖೆಯ ಮುಖ್ಯಾಧಿಕಾರಿಗಳಾಗಿ ಅವಿಶ್ರಾಂತರಾಗಿ ದುಡಿದುಕೊಂಡ ರೀತಿಯನ್ನು ಕಣ್ಣಾರೆ ಕಂಡ ನಾನು ಅವರನ್ನು ವಾರ್ತಾ ಇಲಾಖೆಯಿಂದ ಬೀಳ್ಕೊಡುವ ದಿನ ಓದಿದ ನನ್ನ ಕವನದಲ್ಲಿ ಕನ್ನಡಿಸಲು ಪ್ರಯತ್ನಿಸಿದ್ದೆ. ಆ ಕವನದ ಒಂದು ಸಾಲು ಸಭಿಕರಲ್ಲನೇಕರ ಮುಖ ಅರಳುವಂತೆ ಮಾಡಿತ್ತೆಂಬುದು ನನಗಿಂದಿಗೂ ಅಭಿಮಾನದ ಸ್ಮರಣೆಯಾಗಿ ಉಳಿದಿದೆ- "ಯಾವ ಕೆಲಸಕ್ಕೆ ಕರೆದರೂ ಸಿದ್ಧಯ್ಯ!"



ಬೆಂಗಳೂರಿಗೆ ಹೋಗಿ ಶ್ರೀ ಸಿದ್ಧಯ್ಯನವರನ್ನು ಸೇರಿಕೊಳ್ಳುವುದು ನನಗೆ ಅಭಿಮಾನದ ಸಂಗತಿಯಾಗಿತ್ತು. ಎರಡು ವರ್ಷಗಳ ನಂತರ ಅವರಿಂದ ಅಗಲುವಾಗ ಆ ಅಭಿಮಾನ ಇಮ್ಮಡಿಗೊಂಡಿತ್ತು. ಕಾರಣ ಕೇಂದ್ರ ಸರಕಾರದ ಪ್ರಚಾರಾಧಿಕಾರಿಯಾಗಿ ಆಯ್ಕೆಯಾಗಿದ್ದ ನಾನು ಹೊರಡಬೇಕಾಗಿದ್ದುದು ಶ್ರೀ ಸಿದ್ಧಯ್ಯ ಪುರಾಣಿಕರ ತಾಯ್ನೆಲಕ್ಕೆ, ಹೈದ್ರಾಬಾದ್ ಕರ್ನಾಟಕಕ್ಕೆ. ಕಲಬುರ್ಗಿಗೆ ವರ್ಗವಾಗಿ ಹೋಗುವುದೆಂದರೆ ಕೈಕಾಲು ಕಳೆದುಕೊಳ್ಳುವುದು ಬಹು ಜನರ ರೂಢಿಯಾಗಿದ್ದ ಆ ದಿನಗಳಲ್ಲಿ ಶ್ರೀ ಸಿದ್ಧಯ್ಯ ಪುರಾಣಿಕರು ನೀಡಿದ ಪ್ರೇರಣೆ-ಪುರಸ್ಕಾರಗಳನ್ನು ಹೊತ್ತು ನಾನು ಅವರು ಹುಟ್ಟಿ ಬೆಳೆದು ಬಂದ ಶರಣ- ದಾಸರ ಸೀಮೆಗೆ ಹೊರಟಿದ್ದೆ!

ಕಲಬುರ್ಗಿಗೆ ಹೊರಡುವ ಮುನ್ನಾದಿನ ಅವರ ಮನೆಯಲ್ಲಿ ನನಗೆ ಮನೆಯವರಿಗೆ ಆತ್ಮೀಯ ಔತಣ ತಿಂಡಿ ತಿನಸುಗಳ ಜೊತೆಗೆ ನಮ್ಮ ಕನಸು – ಮನಸುಗಳ ಮಾತುಗಳು ಸಾಗಿದವು. ನನ್ನ ಕವನಗಳ ವಿಷಯವಾಗಿ ಅವರು ಅಭಿಮಾನದ ಮಾತುಗಳನ್ನಾಡಿ ಕಲಬುರ್ಗಿ ನಾಡಿನಲ್ಲಿ ಇನ್ನೂ ಹೆಚ್ಚಿನ ಸಾಧನೆ ಮಾಡಬಹುದೆಂದೂ ಸೂಚಿಸಿದರು. ಆಗ ತಾನೆ ತಮ್ಮಾ ಬೃಹತ್ಕೃತಿ " ಶರಣ ಚರಿತಾಮೃತ "ವನ್ನು ಪ್ರಕಟನೆಗೊಪ್ಪಿಸಿ ಸಾಂತ್ವನದ ಉಸಿರು ಬಿಡುತ್ತಿದ್ದ ಅವರನ್ನು ನಾನು ಕೇಳಿದೆ- " ನಿಮ್ಮ ಮುಂದಿನ ಯೋಜನೆಯೇನು?"

"ಮುಂದಿನ ಯೋಜನೆ? ಏನು ಯೋಜನೆ ಹಾಕಬೇಕೆಂದೇ ತಿಳಿಯುವಂತಿಲ್ಲ. ಯಾಕೋ ನಮ್ಮ ಸುತ್ತಲಿನ ಬದುಕು ಹದಗೆಡುತ್ತಿದೆ. ಜೀವನದ ಶಾಶ್ವತ ಮೌಲ್ಯಗಳು ಶಿಥಿಲಗೊಳ್ಳುತ್ತಿವೆ. ಯಾವುದನ್ನು ನಾವು ಒಳ್ಳೆಯದೆಂದು ನಂಬಿಕೊಂಡಿದ್ದೆವೋ ಅದರ ಬೆಲೆ ಕಡಿಮೆಯಾಗುತ್ತಿದೆ. ಇಂಥದರಲ್ಲಿ ಏನು ಯೋಜನೆ ಹಾಕಿಕೊಳ್ಳುವುದು?"

ನಾನು ಮೂಕನಾಗಿದ್ದೆ. ಅವರೇ ಮಾತು ಮುಂದುವರಿಸಿದರು "ಇಂದು ಜೀವನದ ಯಾವದೇ ರಂಗವನ್ನು ಪರಿಶೀಲಿಸಿ ನೋಡಿರಿ. ಒಂದು ತರದ ದ್ವೇಷ, ಅಸೂಯೆ, ಅನವಶ್ಯಕ ಸ್ಪರ್ಧಾಭಾವಗಳು ಹೆಡೆಯಾಡು

ತ್ತಿವೆ. ಒಬ್ಬನನ್ನು ಹಿಂದೆ ಹಾಕಿ ತಾನು ಮುಂದೋಡುವ ಭರದಲ್ಲಿದ್ದಾನೆ ಮನುಷ್ಯ. ಮನುಷ್ಯನಲ್ಲಿರಬೇಕಾದ ಸಮತೆ ಮಮತೆಗಳು ಮರೆಯಾಗಿ ಹೋಗುತ್ತಿವೆ. ಮನುಷ್ಯನ ಜೀವನದ ಔಚಿತ್ಯಜ್ಞಾನಕ್ಕೆ ಜಂಗು ಹಿಡಿಯುತ್ತಿದೆ!"

ನಾನು ನಡುವೆಯೇ ಕೇಳಿದೆ

"ಮನುಷ್ಯ ಜೀವನದ ಔಚಿತ್ಯಜ್ಞಾನ ಮಾಡಿಕೊಡುವುದು ಸಾಹಿತಿಯ ಕೆಲಸವೆಂದು ನೀವು ನಂಬುತ್ತೀರಾ?"

"ಮತ್ತಾರ ಕೆಲಸ ಅದು? ಕೇವಲ ಸಾಧು-ಸಂತರಿಗೆ ಆ ಕೆಲಸವನ್ನು ಬಿಟ್ಟುಕೊಡಬೇಕೆಂದು ಯಾರು ಹೇಳಿದ್ದಾರೆ? ಪ್ರತಿಯೊಬ್ಬ ಸಾಹಿತಿಯೂ ಒಬ್ಬ ಶರಣನಾಗಬಹುದು. ಆತ ಯಾವ ವಸ್ತು, ಯಾವ ಶೈಲಿ, ಯಾವ ತಂತ್ರಗಳನ್ನೇ ಬಳಸಲಿ, ಮನುಷ್ಯ ಜೀವನದ ಘನತೆ-ಗೌರವಗಳಿಗೆ ಪೂರಕವಾಗಬಲ್ಲ ಸತ್ಯಗಳನ್ನು ಪ್ರತಿಪಾದಿಸಬಹುದು, ಸತ್ತ್ವ ತತ್ತ್ವಗಳ ಪರಿಪೋಷಣೆ ಮಾಡಬಹುದು"

"ಅಂಥ ತತ್ತ್ವಚಿಂತನದ ಕೃತಿಗಳನ್ನು ಎಷ್ಟು ಜನ ಓದುತ್ತಾರೆ?"

"ಆ ಕೃತಿಗಳದೇ ಒಂದು ಪ್ರತ್ಯೇಕ ಪ್ರಕಾರವಾಗಬೇಕಿಲ್ಲ. ಲಲಿತ ಸಾಹಿತ್ಯದ ಮೂಲಕವೂ ಈ ಕೆಲಸ ನಡೆದರೆ ಸಾವಿರಾರು ಜನ ಓದುತ್ತಾರೆ. ಇಷ್ಟ ಬಂದರೆ ಒಪ್ಪುತ್ತಾರೆ, ಇಲ್ಲವಾದರೆ ಬಿಡುತ್ತಾರೆ."

× × × ×

ಅವು ೧೯೭೬ರ ಜೂನ್ ಮೊದಲ ವಾರದಲ್ಲಿ ಆಡಿದ ಮಾತುಗಳು. ೧೯೭೯ರ ಜೂನ್ ತಿಂಗಳ ಮೊದಲ ವಾರದಲ್ಲಿ ನಾನು ಅವರಲ್ಲಿಗೆ ಹೋದಾಗ ಅವರು ಬಲು ಪ್ರೀತಿಯಿಂದ ತಮ್ಮ ಹೊಸ ಕೃತಿಗಳೆರಡನ್ನು ನನ್ನ ಕೈಗಿಟ್ಟರು. 'ಮೊದಲು ಮಾನವನಾಗು' ಮತ್ತು 'ಕಲ್ಲೋಲ ಮಾಲೆ' ತಾರಾ ಗ್ರಂಥ ಪ್ರಕಾಶನದ ಗೆ. ಪಂಚಾಕ್ಷರಿಯವರು ಪ್ರಕಟಿಸಿರುವ ಈ ಎರಡೂ ಕೃತಿಗಳ ಒಳಪುಟಗಳ ಮೇಲೆ ಕಣ್ಣಾಡಿಸುತ್ತ ಹೋದಂತೆಲ್ಲ ಐದು ವರುಷ



ಗಳ ಹಿಂದೆ ಕಾವ್ಯಾನಂದರಾಡಿದ ಮಾತುಗಳು ನನ್ನ ಮನದಲ್ಲಿ ಮಾರ್ದನಿಗೊಳ್ಳುತ್ತವೆ. ಎರಡು ವರುಷಗಳ ಕಾಲ ಅತಿ ಹತ್ತಿರದಿಂದ ಕಂಡ ಅವರ ನಡೆ-ನುಡಿಗಳ ಸಾರ್ಥಕತೆ ಈ ಗೀತಸಂಕಲನದ ಸಾಲುಸಾಲಿನಲ್ಲಿಯೂ ಒಡೆದು ಕಾಣುತ್ತದೆ. ಅವರ ಮಾನಸ ಸರೋವರದಲ್ಲಿ ಆಗೊಮ್ಮೆ ಈಗೊಮ್ಮೆ ಆಕಾರ ಪಡೆದು ಹಾಗೊಮ್ಮೆ ಹೀಗೊಮ್ಮೆ ಉರುಳಿ ಹೋಗಬಹುದಾಗಿದ್ದ ಕಲ್ಲೋಲ ಮಾಲೆಯನ್ನು ಶ್ರೀ ಸಿದ್ಧಯ್ಯನವರು ಬಲು ಸೊಗಸಾಗಿ ಶಬ್ದಗಳ ಸರಪಳಿಗಳಲ್ಲಿ ಸೆರೆಹಿಡಿದಿಟ್ಟಿದ್ದಾರೆ. ಭಾವ-ಗೀತಗಳಿಂದ ಅನುಭಾವ ಗೀತಗಳ ವರೆಗೆ ಹರಹುಗೊಂಡಿರುವ ಕಾವ್ಯಾನಂದರ ವಾಗ್‌ಲಹರಿ ಈ ಸಂಕಲನದಲ್ಲಿ ಅವರ ಸುಪ್ತಚೇತನವೊಂದನ್ನು ಬೆಳಕಿಗೆ ತಂದಿದೆ. ಅವರ ಅಂತರಂಗದಲ್ಲಿ ಹೊತ್ತಿಕೊಂಡ ವಿಚಾರ ದೀಪ್ತಿಯ ಬೆಳಕಿಗೆ ಅವರ ಮೃದು ಮಧುರ ಮಾತುಗಳು ಅತ್ಯಂತ ಅನುಕೂಲ ವಾಹಕಗಳಾಗಿವೆ. ಸಿರಿಯಾದ ದಾರ್ಶನಿಕ ಕವಿ ಖಲೀಲ್ ಗಿಬ್ರಾನ್‌ರು ತಮ್ಮ ಅಂತರಾತ್ಮವನ್ನು ಕುರಿತು ಆಡಿದ ಒಂದು ಮಾತನ್ನಿಲ್ಲಿ ಸ್ಮರಿಸಿಕೊಳ್ಳಬಹುದು.

" have naught but human words
To interpret your dreams.
Your desires and your instructions "

ಕವಿಯ ಮಾನಸ ಸರೋವರದಲ್ಲಿ ಆಗೊಮ್ಮೆ ಈಗೊಮ್ಮೆ ಮೊಗದೋರುವ ಆಲೋಚನಾ ವೀಚಿಗಳನ್ನು ಶಬ್ದ ಪಾತ್ರೆಗಳಲ್ಲಿ ತುಂಬಿಡುವದು ಬಲು ನಾಜೂಕಾದ ಕೆಲಸ. ಆಕಾರದಲ್ಲಿ ಕಿರಿದಾದ ಶಬ್ದಪಾತ್ರೆ ಕವಿಯ ಮಾನಸ ಸರೋವರದ ಭೂಮದರ್ಶನ ಮಾಡಿ ಕೊಡಬಲ್ಲ ಶಕ್ತಿಯುಳ್ಳದ್ದು. ಅದರಲ್ಲಿರುವ ಹತ್ತು ಹನಿಗಳು ಹತ್ತು ತಲೆಮಾರುಗಳಿಗೆ ಸಂಜೀವಿನಿ ಶಕ್ತಿಯೊದಗಿಸಿಕೊಡಬಲ್ಲವು. ಆದರೆ ಅದು ಸಾಮಾನ್ಯ ಸಾಧನೆಯೇನಲ್ಲ. ಸಾಮಾನ್ಯ ಮನುಷ್ಯನೊಬ್ಬ ನೂರು ವರುಷ ಮಾಡುವ ಅಧ್ಯಯನ, ಮನನ, ಚಿಂತನಗಳನ್ನು ಕವಿ ಮೂರೇ ಮೂರು ವರುಷಗಳಲ್ಲಿ ಮಾಡಿ ತನ್ನ ಚಿಂತನೆಯ ಫಲಗಳನ್ನು ತನ್ನ ಹಿಂದೆ ಹಿಂದೆ ಬರುವವರ ದಾರಿಯ ಬುತ್ತಿ ಎಂದು ಕಟ್ಟಿಟ್ಟು ಹೋಗುತ್ತಾನೆ. ಅಂಥ ಬಹುಕಾಲ ಬಾಳಬಲ್ಲ

ಮಾನವ ಜೀವನದ ಮೌಲ್ಯಗಳನ್ನು ಎತ್ತಿ ತೋರಿಸುವ ಸಾಹಿತ್ಯ ಸೃಷ್ಟಿಗೆ ಬಹು ವಿಶಾಲವಾದ ಜೀವನ ದೃಷ್ಟಿಬೇಕು. ಅಲ್ಪದೃಷ್ಟಿಯಿಂದ ಅಲ್ಪ ಸೃಷ್ಟಿಯಾಗುತ್ತದೆ. ವ್ಯೋಮ ದೃಷ್ಟಿಯಿಂದ ಭೂಮ ಸೃಷ್ಟಿಯಾಗುತ್ತದೆ. ಕವಿ ದೃಷ್ಟಿ ವಿಶಾಲವಾಗುತ್ತ ಹೋದಂತೆ ಅವನ ವ್ಯಕ್ತಿತ್ವಕ್ಕೊಂದು ಅಪೂರ್ವ ಕಾಂತಿಯೊದಗಿ ಬರುತ್ತದೆ. ಅವನು ನೋಡುವ, ನುಡಿಯುವ, ಮಾಡುವ ರೀತಿ ನೀತಿಗಳಲ್ಲಿ ಅಲೌಕಿಕ ಆನಂದವುಂಟಾಗುತ್ತಿದೆ. ಈ ಅಲೌಕಿಕ ಆನಂದ ಒಂದೆ ತಲೆಮಾರಿನ ಸೊತ್ತಾಗದೆ ಬಹುಕಾಲ ಬಹು ಜನರಿಗೆ ಹಿತವುಂಟು ಮಾಡುವ ರಸನಿಧಿಯಾಗಿ ಉಳಿಯುತ್ತದೆ. ಅಂತೆಯೇ ಕವಿ ಕಾವ್ಯದರ್ಶನವನ್ನು ನಾವು ತಲೆ ತಲಾಂತರಗಳಿಂದ ಮನ್ನಿಸುತ್ತ ಬಂದಿದ್ದೇವೆ ಸನ್ಮಾನಿಸುತ್ತ ನಡೆದಿದ್ದೇವೆ. ಅಮೇರಿಕಾದ ಕ್ರಾಂತಿಶೀಲ ಕವಿ ವಾಲ್ಟವಿಟ್‌ಮನ್ ಹೇಳುತ್ತಾನೆ.

Of all aces and eras those State with veins
full of poetic Stuff most need poets
and are to have the greatest
and use them the greatest,
Their Presideuts shall not be their common referee
So much as their poets.

ಕವಿ ಕಾವ್ಯದರ್ಶನದ ಮಹೋನ್ನತಿಯ ಬಗ್ಗೆ ಯಾವ ವಾದವಿರಲಾರದು. ಆದರೆ ಕವಿಯ ಚಿತ್ತಚೇತನದ ಕ್ರಿಯಾ ಕೌಶಲ್ಯಗಳನ್ನು ಅರ್ಥ ಮಾಡಿಕೊಳ್ಳುವ ಪುರಸೊತ್ತು ಇಂದಿನವರಿಗಿಲ್ಲವಾಗಿದೆ. ಬದುಕು ಒಂದು ವ್ಯಾವಹಾರಿಕ ಕಾರ್ಯ ಕ್ಷೇತ್ರವಾಗಿದೆ. ವಿವಿಧ ಸ್ತರಗಳಲ್ಲಿ ಬೆಳೆದ ಸ್ಪರ್ಧಾ ಭಾವನೆಗಳಿಂದ ಮನುಷ್ಯನಲ್ಲಿ ಮೂಡಿಕೊಳ್ಳುತ್ತಿರುವ ದ್ವೇಷಾಸೂಯೆಗಳನು ನಿಸ್ತರಿಸುವುದು ಕಠಿಣವೆನಿಸುತ್ತಿದೆ. ಸುಂದರ ಜೀವನ ನಡೆಸಲೆಂದಿರುವ ಈ ಸಮೃದ್ಧ ಸೃಷ್ಟಿ ಮನುಷ್ಯನ ತಾತ್ಕಾಲಿಕ ಸ್ವರ್ಧೆಯಲ್ಲಿ ಸಿಕ್ಕು ತನ್ನ ಅಸ್ತಿತ್ವದ ಮಹತ್ವವನ್ನೇ ಕಳೆದುಕೊಳ್ಳುವಂತಿದೆ.



Humanity is the spirit of the Supreme Being on earth and that Lumanity is standing amidst ruins hid ing its nakedness behind tattered rags sheddding tears upon hollow cheeks and calling for its children with pitiful voice. But the children are busy singing their clan's anthem they are busy Sharpening the swords and can not hear the cry of their mothers

ಎಂದ ಖಲೀಲ್ ಗಿಬ್ರಾನ್‌ರ ದರ್ಶನಧ್ವನಿಯ ಸತ್ಯವನ್ನು ನಾವಿಂದು ಚೆನ್ನಾಗಿಯೇ ಮನಗಂಡಿದ್ದೇವೆ. ವಿನಾಶದ ಹೊಸತಿಲದತ್ತ ಸರಿಸರಿದು ಹೋಗುತ್ತಿರುವ ಮಾನವತೆಯ ತಿಳಿವಿಗಾಗಿ, ಉಳಿವಿಗಾಗಿ ವಿಶ್ವದ ಕವಿ-ಕಲಾವಿದ-ದಾರ್ಶನಿಕರೇಸು ಜನ ತಮ್ಮ ಜೀವಮಾನಗಳನ್ನು ಮೀಸಲಿಡಬೇಕು !

ಆದರೆ ಲೋಕೋದ್ಧಾರ ಮಾಡುವ ನಿರ್ದಿಷ್ಟ ಉದ್ದೇಶವಿರಿಸಿಕೊಂಡು ಯಾವ ಕವಿ ಕಾವ್ಯಸೃಷ್ಟಿ ಮಾಡುತ್ತಾನೆ? ಬದುಕಿನ ಓರೆ ಕೋರೆಗಳನ್ನು ಕಂಡು ಕನಲಿ ಅವನ ಹೃದಯ ಗೋಗರೆದಾಗ, ಅವನ ಸಾಕ್ಷಿಪ್ರಜ್ಞೆಗೆ ಪ್ರತಿಭೆಯ ಕಾವು ತಗಲಿದಾಗ ಅವನಿಂದ ಕಾವ್ಯಸೃಷ್ಟಿಯಾಗುತ್ತದೆ. ಲೋಕಹಿತಚಿಂತನೆ ಆವರ ಪ್ರೇರಕಶಕ್ತಿಯಾಗಿರಬಹುದು; ಆದರೆ ಅದರ ಪರಮಗುರಿಯಾಗಿರಲಾರದು. ಅದು ತನ್ನಷ್ಟಕ್ಕೆ ತಾನೆ ಮೆಲ್ಲಮೆಲ್ಲನೆ ನಡೆಯಬಹುದಾದ ಪ್ರಕ್ರಿಯೆ. ಕವಿಯ ಕೃತಿ ಈ ಜೀವದ ಪರಿವರ್ತನೆಯ ಸುಳುಹು ಹಾಕಿಕೊಡುವ ರೇಖಾ ಚಿತ್ರ ಮಾತ್ರ. ಕವಿಯ ತಳಮಳ ಅರಿತುಕೊಳ್ಳಬಲ್ಲ ಸಹೃದಯಿ ಅವನ ಚಿಂತನ ಶೀಲ ಚಿತ್ತ ಪ್ರವೃತ್ತಿಗಳಿಗೆ ಸೂಕ್ತ ಅರ್ಥವಿತ್ತು ಅವನ ಅಂತರಂಗದಾಶೆಗಳನ್ನು ವಿಸ್ತರಿಸಲು ಪೂರೈಸಲು ಸಹಾಯಕನಾಗುತ್ತಾನೆ. ಹೀಗೆ, ಬಹು ಸಾವಧಾನದಿಂದ ಸಾಹಿತಿಯ ಪ್ರಭಾವಲಯ ಮನುಷ್ಯ ಜೀವನವನ್ನು ವ್ಯಾಪಿಸುತ್ತದೆ. ಆ ಬೆಳಕನ್ನು ನೋಡಬೇಕೆಂಬ ಕಳಕಳಿಯ ಕಣ್ಣಿದ್ದವರಿಗೆ ಅದು ಕಾಣುತ್ತದೆ.

× × × ×

ಅಂತೆಯೇ, ಶ್ರೀ ಕಾವ್ಯಾನಂದರ ಕಲ್ಲೋಲಮಾಲೆ ಅವರ ಚಿಂತನ ಪರತೆಯ ಹೊಸ ಪದರೊಂದನ್ನು ತೆರೆದು ತೋರಿಸುವಂತಿದೆ- ಕಳಕಳಿಯ ಕಣ್ಣಿದ್ದವರಿಗೆ!

"ಮರುಳಾಗಿದೆ ಕತ್ತಲೆಗೇ
ವಿಜ್ಞಾನದ ಗೂಗೆ
ಕುಣಿಯಲದುವೆ ಬಾಳ ಬನದಿ
ಆಗಿ ಸೊಗದ ಸೋಗೆ!"

ವಿಜ್ಞಾನದ ವಿಕೃತಿಯ ಗೂಗೆ ಸುಜ್ಞಾನದ ಸತ್ಕೃತಿಯ ಸೋಗೆಯಾಗಿ ಕುಣಿಯಲಿ ಎಂಬ ಸದಾಶಯ ಈ ಅನುಭಾವಗೀತಗಳ ಉಸಿರಾಗಿದೆ. ಕವಿಯ ಹೃದಯಾಂತರಾಳದಿಂದ ಹೊರಹೊಮ್ಮಿದ ಒಂದೊಂದು ಮಿಂಚುನುಡಿ ಇಲ್ಲಿ ಸರಳ ಸುಂದರ ಕಾವ್ಯವಾಗಿ ಪರಿಣಮಿಸಿದೆ. ಮಾನವ ಜೀವನದ ಚಿರಂತನ ಮೌಲ್ಯಗಳು ಈ ವಿಜ್ಞಾನಯುಗದಲ್ಲಿ ಸವೆದ ನಾಣ್ಯಗಳಂತೆ ನಿರುಪಯುಕ್ತವಾಗುವದನ್ನು ಯಾವ ಪ್ರಜ್ಞಾಶೀಲನೊಪ್ಪುತ್ತಾನೆ? ಈ ಕವಿಯ ಚಿಂತೆ-

ತಿಳಿವಿನುಕ್ಕಿನ ತೆಕ್ಕೆಯಲ್ಲಿ ಬಿಕ್ಕುತಲಿಹುದು
ಒಲವು ಅಕ್ಕಸಬಡುತ ಚಡಪಡಿಸುತ
ಬಲದ ಕಪಿಮುಷ್ಟಿಯಲಿ ವಿಲವಿಲನೆ ಒದ್ದಾಡಿ
ತಳಿವು ತಳಮಳಿಸುತಿದೆ ತಡವಡಿಸುತ!

ಆದರೆ ಇದೊಂದು ನಿರಾಶೆಯ ನಿಟ್ಟುಸಿರಲ್ಲ. ಬದುಕಿನಲ್ಲಿ ಭರವಸೆಯಿರುವ ಕವಿಗೆ ನಿರಾಶೆಯ ಹೆಣ್ಣು ಸೋಬಾನೆಗಳು ಸಲ್ಲವು. ಅವನ ಆಶಾವಾದ ಅಜೇಯ, ಅನಂತವಾದುದು. ಕ್ಷಣಿಕ ಕಾಳಿಮೆಯಾಚೆಗಿರುವ ಬೆಳಕಿನ ಸೀಮೆಯ ಮೇಲೆಯೇ ಅವನ ಕಣ್ಣು!

ಮಾನವರು ಕೆಟ್ಟಾರು
ಮಾನವತೆ ಉಳಿದೀತು!



ಕವಿ ದೇಹವಿಟ್ಟಾನು,
ಕವಿತೆಯುಳಿದೀತು!
ಕೃತಿಗಿಳಿಯದಿದ್ದರೂ
ಕನಸೊಂದು ಉಳಿದೀತು!
ಅವನುಂಡೆ ಬರಲಿರುವ
ಮನಸು ಬೆಳೆದೀತು!

ಇಂಥ ಸರಳ ಸುಂದರ ಹೃದ್ಯಭಾವಗಳು ಈ ಸಂಕಲನದ ವೈಶಿಷ್ಟ್ಯ. ಕವಿಯ ಜೀವನಶೃದ್ಧೆಗೆ ಪೌರಾಣಿಕ ಸಂಕೇತಗಳ ತೊಡವು ಇಲ್ಲಿಯ ಅನೇಕ ಹಾಡುಗಳ ಬೆಡಗಿಗೆ ಕಾರಣವಾಗಿದೆ.

ಒಳಿತಿಗೆ ವನವಾಸ ಬಂತು
ರಾಜಕೀಯ ದ್ಯೂತದಿ
ಕೆಡಕಿಗೆ ಅಧಿಕಾರ ಬಂತು
ಅಧಿಕ ಜೀವಜಾತದಿ
ಪಂಚಶೀಲ ಪಾಂಚಾಲಿಯ
ವಸ್ತ್ರಹರಣ ನಡೆದಿದೆ
ದುರ್ಯೋಧನ ದುಶ್ಯಾಸನ-
ರಟ್ಟಹಾಸ ನಡೆದಿದೆ.
ತಾಳು ಧರ್ಮ-ದ್ರೌಪದಿ,
ಮುಗಿಯಲಿದೆ ಪಣದ ಅವಧಿ
ಬರುವ ಪುಣ್ಯ ಪಾರ್ಥನಿಗೆ
ಋತದ ಪಾರ್ಥಸಾರಥಿ!

ಹತ್ತಾರು ದೃಷ್ಟಾಂತ-ಸಂಕೇತಗಳ ಸರಪಳಿ ಹೆಣೆದು ಕಾವ್ಯಾನಂದರು ತಮ್ಮ ಜೀವ-ಜೀವಾಳವನ್ನು ಈ ಪುಟ್ಟ ಪದ್ಯಗಳಲ್ಲಿ ಎರಕ ಹೊಯ್ಯಲು ಪ್ರಯತ್ನಿಸಿದ್ದಾರೆ. ಅವರ ಜಲಪಾತದ ಅಬ್ಬರ, ಕರುಣಾಶ್ರಾವಣದ ಶಬ್ದವೈಪುಲ್ಯ, ಮಾನಸ ಸರೋವರದ ವಸ್ತುವೈವಿಧ್ಯ ಕಲ್ಲೋಲಮಾಲೆ

ಯಲ್ಲಿ ಇಲ್ಲದಿರಬಹುದು. ಆದರೆ ಕಲ್ಲೋಲಮಾಲೆಯಲ್ಲಿ ಕಣ್ಣು ತೆರೆದ ಅವರ ದರ್ಶನ ಅವರ ಇನ್ನಿತರ ಸಂಕಲನಗಳಲ್ಲಿ ಕಾಣಸಿಗದು. ಈ ವಚನ ಗೀತಗಳ ಮಧುರ ಸಮನ್ವಯದಲ್ಲಿ ಅವರ ವ್ಯಕ್ತಿತ್ವದ ಕುರುಹುಗಳನ್ನು ಸುಲಭವಾಗಿ ಗುರುತಿಸಬಹುದು.

ಉರಿವುದದು ಅಗ್ನಿಗುಣ
ಉರಿದು ಬೆಳಕಾಗುವುದೆ ಜ್ಯೋತಿ ಗುಣವು
ಸವಿಯಹುದು ನುಡಿಯ ಗುಣ
ಸವಿಯು ಬೆಳಕಾಗುವುದೆ ಗೀತ ಗುಣವು !

ಎಂಬಂಥ ಪದ್ಯಗಳಲ್ಲಿ ಕಾವ್ಯಾನಂದರ ಜೀವನ ದೃಷ್ಟಿಯೊಡನೆ ಕಾವ್ಯದೃಷ್ಟಿಯೂ ಹದಗೊಂಡು ಮುದಗೊಂಡು ಒಂದು ನಿರ್ದಿಷ್ಟ ನೆಲೆಗೆ ಬಂದು ತಲುಪಿರುವದನ್ನು ಗಮನಿಸಬಹುದು.

ಸುಟ್ಟ ದುರ್ಗುಣ ಶುದ್ಧವಾಗಿ ಸದ್ಗುಣವಾಗುತ್ತದೆ !
ಸುಟ್ಟ ಕರ್ಮ ನಿರ್ಮಲವಾಗಿ ಧರ್ಮವಾಗುತ್ತದೆ!
ಸುಟ್ಟ ಹಮ್ಮು ಶುದ್ಧವಾಗಿ ಶಿವವಾಗುತ್ತದೆ !

ಇಂಥ ಋತದೃಷ್ಟಿಯ ಕವಿಯ ಮನಸು ಹೊಸ ಬಾಳಿನ ಹೊಂಗನಸುಗಳನ್ನು ಕಾಣುವುದು ಸಹಜ. ಆದರೆ ಸಕಲ ಸಂಪದ ಬಂತು ಶಾಂತಿಯೆಲ್ಲಿ ? ಎಂದು ಅವನ ಮೂಲ ಪ್ರಶ್ನೆ ಅದಕ್ಕೆ ಯಾರ ಯಾವ ಉತ್ತರ ಸಮರ್ಪಕ ?

ಶಾಸ್ತ್ರ – ' ನೇತಿ ನೇತಿ ' ಎಂದಿತು
ಧರ್ಮ – ' ನೀತಿ ನೀತಿ ' ಎಂದಿತು
ಹೃದಯ – ' ಪ್ರೀತಿ ಪ್ರೀತಿ ' ಎಂದಿತು
..........................................
ವಕ್ರರೇಖೆ ನೂರು ವಿಧ
ಸರಳ ರೇಖೆಯೊಂದೆ



ಜಗದ ಭಾಷೆ ನೂರು ವಿಧ
ಹೃದಯ ಭಾಷೆಯೊಂದೆ !

ಈ ಹೃದಯದ ಪ್ರೀತಿಗೆ ಭಾಷೆಯೊಂದಿದೆ. ಹೃದಯದ ಭಾಷೆಗೆ ನೀತಿಯೊಂದಿದೆ ಮತ್ತೆ ' ನೇತಿ ನೇತಿ ' ಎನ್ನುವ ಶಾಸ್ತ್ರಗಳ ಬಂಧನಗಳೇಕೆ ? ಮನುಷ್ಯನ ಮನಸ್ಸು ಮುಕ್ತ ರೀತಿಯಿಂದ ವಿಹರಿಸಿ ಹೊಸ ಬದುಕಿನ ಸೊಗಸು ಪಡೆಯುವ ಸಾತ್ವಿಕ ಮಾರ್ಗ ಅರಸುವಲ್ಲಿ ಅನೇಕ ಅಡೆತಡೆಗಳು ಬಂದಾವು. ಅವುಗಳಿಗಂಜಿ ನಿಷ್ಕ್ರಿಯನಾಗುವ ಮನೋವೃತ್ತಿ ಮಾತ್ರ ಸಲ್ಲದು !

ಕೇದಗೆಯ ಚಂದನದ ಗಂಧವನು ಬಯಸುವೊಡೆ
ಸರ್ಪಗಳ ವಿಷದಂತಕಂಜಬೇಡ
ಸಾಗರದ ಸಿಂಪುಗಳ ಮುತ್ತುಗಳ ಬಯಸುವೊಡೆ
ಘೋರ ಜಲಪ್ರಾಣಿಗಳಿಗಂಜಬೇಡ
ಜೇಂಗೊಡದ ಸವಿಜೇನಿನಾಸ್ವಾದ ಬಯಸುವೊಡೆ
ಜೇನು ಹುಳುಗಳ ಕಡಿತಕಂಜಬೇಡ
ಜೀವನದ ಮಾಧುರ್ಯ, ಸೌಂದರ್ಯ ಬಯಸುವೊಡೆ
ಜೀವನದ ಕಹಿ, ವಿಕೃತಿಗಂಜಬೇಡ

ಇಂತು ಬದುಕಿನಲ್ಲಿ ಭರವಸೆಯಿಡುವ ಕವಿಜೀವ ಸೋಲಿನ ಸರ್ಪದ ಹೆಡೆಯಲ್ಲಿ ಗೆಲುವಿನ ರತ್ನವನ್ನು ಅರಸುತ್ತದೆ ; ಶೋಕದ ತಂತಿ ಯಲ್ಲಿ ಯೇ ಅಶೋಕದ ಆಲಾಪನೆಯನ್ನು ನುಡಿಸುತ್ತದೆ, ಕೊನರದ ಕೊರಡಿನಲ್ಲಿಯೇ ಬಯಸಿದ ಬೊಂಬೆಯನ್ನು ಕೆತ್ತಿನೋಡುತ್ತದೆ; ನಿರಾಶೆಯ ಬಸಿರಿನಲ್ಲಿಯೇ ಆಶೆಯ ಬೀಜವನ್ನು ಬಿತ್ತಿ ನೋಡುತ್ತದೆ' ಬದುಕಿನಲ್ಲಿ ಸಾಮಾನ್ಯವಾಗಿ-

ಅತ್ತ ಗಿರಿ ಇತ್ತ ದರಿ
ನಡುವೆ ಕವಲು ದಾರಿಯು
ಅತ್ತ ಮಬ್ಬು ಇತ್ತ ಮಬ್ಬು
ನಡುವೆ ದೀಪಧಾರಿಯು !

ಹೌದು, ಕವಿಯ ಕ್ರಾಂತಿಶೀಲ ಹೃದಯದೀಪದ ಆಶಾಕಿರಣಗಳು ಮನುಷ್ಯನ ಬದುಕಿಗೆ ದಾರಿಯನ್ನು ತೋರಿಸಬಲ್ಲವು; ಕತ್ತಲೆಯಿಂದ ಬೆಳಕಿನೆಡೆಗೆ ಅವನ ಕೈವಿಡಿದು ನಡೆಸಬಲ್ಲವು ; ಆಗಿಷ್ಟು ಈಗಿಷ್ಟು ದೊರೆಯುವ ಜೀವನ ಸುಖಕ್ಕೆ ಸಾರ್ಥಕತೆ ತಂದು ಕೊಡಬಲ್ಲವು. ಜೀವನ ಸುಖವೆಂಬುದು ಸದಾಕಾಲ ದೊರೆಯುವನಿತು ಸೋವಿ ವಸ್ತುವಲ್ಲ ; ದುಡಿದು ಪಡೆದವರಿಗೆ ದೊರೆಯುವ ಅಮೂಲ್ಯನಿಧಿ. ಕವಿಯ ಮಾತಿನಲ್ಲಿ ಹೇಳುವುದಾದರೆ–

ಅಲ್ಲೊಂದು ಇಲ್ಲೊಂದು ಚಿನ್ನಗ ಗಣಿ
ಯಾವುದೋ ಫಣಿಯಲ್ಲಿ ಚಿಂತಾಮಣಿ !

ಇಂಥ ಸಾರ್ಥಕ ಸಾಂಕೇತಿಕ ಸಾಲುಗಳಿಂದ ತುಂಬಿರುವ ಕಾವ್ಯಾನಂದರ ಕಲ್ಲೋಲಮಾಲೆಯನ್ನು ಓದಿ ಮುಗಿಸಿರುವಂತೆ ಐದು ವರ್ಷಗಳ ಹಿಂದೆ ಅವರಾಡಿದ ಆ ಮಾತನ್ನು ಮೆಲುಕಾಡಿಸುತ್ತದೆ ಮನಸು.

“ ಪ್ರತಿಯೊಬ್ಬ ಸಾಹಿತಿಯೂ ಒಬ್ಬ ಶರಣನಾಗಬಹುದು : ಆತ ಯಾವ ವಸ್ತು, ಯಾವ ಶೈಲಿ, ಯಾವ ತಂತ್ರಗಳನ್ನೇ ಬಳಸಲಿ, ಮನುಷ್ಯ ಜೀವನದ ಘನತೆ-ಗೌರವಗಳಿಗೆ ಪೂರಕವಾಗಬಲ್ಲ ಸತ್ಯಗಳನ್ನು ಪ್ರತಿಪಾದಿಸಬಹುದು ; ಸತ್ತ್ವ ತತ್ತ್ವಗಳನ್ನು ಪರಿಪೋಷಣೆ ಮಾಡಬಹುದು.......– ಲಲಿತ ಸಾಹಿತ್ಯದ್ದ ಮೂಲಕವೂ ಈ ಕೆಲಸ ನಡೆದರೆ ಸಾವಿರಾರು ಜನ ಓದುತ್ತಾರೆ ; ಇಷ್ಟಬಂದರೆ ಓದುತ್ತಾರೆ, ಇಲ್ಲನಾದರೆ ಬಿಡುತ್ತಾರೆ.”

— ಬಿ. ಎ. ಸನದಿ

**ಈ ಶತಮಾನದ ಮೇರುಕೃತಿ**

# “ಶರಣ ಚರಿತಾಮೃತ”

ಶರಣರು! ಸಕಲ ಜೀವರಾಶಿಗಳ ಲೇಸ ಬಯಸಿದ ಶರಣರು! ಶಿವನಿಗಿಂತಲೂ ಮಿಗಿಲೆನಿಸಿದವರು! ‘ಗುಹೇಶ್ವರನೆಂಬುದೊಂದು ಕಿಂಚಿತ್’ ಎಂದು ಉದ್ಘೋಷಿಸಿದ ಶರಣರು! ದೇವತೆಗಳಿಗೆ ದೇವತ್ವವನ್ನು ಕಡಕೊಟ್ಟ ಪಾವನರು. ಇಂಥ ಶರಣರ ಚರಿತ್ರೆಯನ್ನು ಅದೂ ಇಂದಿನ ಜಗತ್ತಿಗೆ ಮನ್ನಣೆಯಾಗುವಂತೆ ಬರೆಯ ಹೊರಟವನಿಗೆ ಎಂಟೆರ್ದೆಬೇಕು. ಶರಣ ಜೀವನದ ಆಳ ವಿಸ್ತಾರಗಳನ್ನು ಕಂಡ ಹದುಳಸಿನೂ ಸಹೃದಯಿಯೂ ಆಗಿರಬೇಕು ಚರಿತ್ರಕಾರ. ಈ ದೃಷ್ಟಿಯಿಂದ ನೋಡಿದರೆ “ಶರಣ ಚರಿತಾಮೃತ ”ವನ್ನು ರಚಿಸಿದ ಶ್ರೀ ಸಿದ್ಧಯ್ಯಾ ಪುರಾಣಿಕ ( ಕಾವ್ಯಾನಂದ)ರು ಈ ಗ್ರಂಥ ರಚನೆಗೆ ಮುನ್ನ ತಪಗೈದು ಶರಣರ ಜೀವನವನ್ನು ಸರಿಯಾಗಿ ತಿಳಿದುಕೊಂಡಿದ್ದಾರೆ ಎಂದು ವಿಶ್ವಾಸದಿಂದ ಹೇಳಬಹುದು. ಏಕೆಂದರೆ ಶರಣ ಚರಿತಾಮೃತದ ಬರವಣಿಗೆ ಕೇವಲ ಸಾಹಿತಿಯದಲ್ಲ, ರಸ ಋಷಿಯದು, ಶರಣನದು.

ಅಸಂಖ್ಯಾತರಾದ ಶರಣರಲ್ಲಿ ಶ್ರೀ ಪುರಾಣಿಕರು ಈ ಗ್ರಂಥಕ್ಕಾಗಿ ಕೇವಲ ಅರುವತ್ತುಮೂವರನ್ನು ಆಯ್ದುಕೊಂಡಿದ್ದಾರೆ. ಹೀಗೆ ಆಯ್ದುಕೊಳ್ಳುವಲ್ಲಿ ಅವರು ತೋರಿದ ಜಾಣ್ಮೆ ಅವರ ಪಾಂಡಿತ್ಯಕ್ಕೆ, ಅನುಭವಕ್ಕೆ ಸಾಕ್ಷಿಯಾಗಿದೆ. ಇದರಲ್ಲಿ ಭಾರತದ ಎಲ್ಲ ಭಾಗದ, ಎಲ್ಲ ಶತಮಾನದ, ಎಲ್ಲ ಕಾಯಕದ ಶರಣರು, ಶರಣೆಯರು ಸೇರ್ಪಡೆಯಾಗಿದ್ದಾರೆ. ಲೆಕ್ಕಕ್ಕೆ ಅರುವತ್ತುಮೂರಾದರೂ ಇವರ ಚರಿತ್ರೆಯೊಡನೆ ನೂರಾರು ಇನ್ನಿತರ ಶರಣರ ಚರಿತ್ರೆಗಳೂ ಸಮಾವೇಶವಾಗಿವೆ.

ಚರಿತ್ರೆಯ ನಿರೂಪಣೆ ಒಂದೇ ವಿಧವಾಗಿದ್ದು ಬೇಸರ ತರುವಂಥದಾಗಿಲ್ಲ. ಶರಣರ ದಿವ್ಯ ಜೀವನಕ್ಕೆ ತಕ್ಕಂತೆ ನಿರೂಪಣೆಯು ಬೇರೆ ಬೇರೆ

ಯಾಗಿದೆ. ಹೀಗಿದ್ದರೂ ಒಟ್ಟು ಗ್ರಂಥದ ನಿರೂಪಣಾಕ್ರಮದಲ್ಲಿ ಒಂದು ಏಕಸೂತ್ರತೆ ಇದೆ. ಸಾಮಂಜಸ್ಯ ಇದೆ. ವಿಷಯಕ್ಕೆ ತಕ್ಕಂತೆ ಶೈಲಿಯ ನಾಡಿಯು ಭಿನ್ನವಾಗಿ ಮಿಡಿದರೂ ಅದರ ಹೃದಯದ ನಾಡಿ, ಆತ್ಮದ ನಾಡಿ ಒಂದೇ. ಪ್ರತಿ ಶರಣನ ಚರಿತೆಯ ಪ್ರಾರಂಭ, ಕೊನೆ ಕಲಾತ್ಮಕವಾಗಿವೆ, ಹೃದಯಂಗಮವಾಗಿವೆ.

ಶರಣರ ಚರಿತ್ರೆಗೆ ನೂರಾರು ಅಲ್ಲ ಸಾವಿರಾರು ಆಕರಗಳಿವೆ ಶ್ರೀ ಪುರಾಣಿಕರು ಉಪಲಬ್ಧವಿರುವ ಎಲ್ಲ ಆಕರಗಳನ್ನೂ ಬಳಸಿಕೊಂಡಿದ್ದಾರೆ; ತಮಿಳು, ತೆಲುಗು, ಸಂಸ್ಕೃತ, ಮರಾಠಿ ಮುಂತಾದ ಭಾಷೆಗಳಲ್ಲಿರುವ ಶರಣರ ಚರಿತ್ರೆಯ ಎಲ್ಲ ಅಂಶಗಳನ್ನು ಉಪಯೋಗಿಸಿಕೊಂಡಿದ್ದಾರೆ. ಹಂತಿಯ ಹಾಡುಗಳಿಂದ ಮಹಾ ಕಾವ್ಯಗಳ ವರೆಗೆ-ಯಾವುದನ್ನೂ ಬಿಡದೆ ಎಲ್ಲವನ್ನೂ ಬಳಸಿಕೊಂಡಿದ್ದಾರೆ— ಎಷ್ಟು ಬೇಕೋ ಅಷ್ಟನ್ನು ಹಿತಮಿತವಾಗಿ ಈ ಗ್ರಂಥದ ಕೊನೆಗೆ ಸುದೀರ್ಘವಾದ ಸಹಾಯಕ ಸಾಹಿತ್ಯ ಸೂಚಿಯಿದೆ, ಶರಣವಂಶವಲ್ಲರಿಯಿದೆ. ಇಷ್ಟೆಲ್ಲವನ್ನೊಳಗೊಂಡ ಈ ಗ್ರಂಥ ಶರಣ ಸಾಹಿತ್ಯ, ಚರಿತ್ರೆಯ ವಿಶ್ವಕೋಶವಾಗಿದೆಯೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಇಲ್ಲಿಯ ಭಾಷೆ ಹದಗೊಂಡ ಹೃದಯದಿಂದ ಹೊಮ್ಮಿದ್ದು; ಇವರಲ್ಲಿ ಗದ್ಯದ ನಿರರ್ಗಳತೆ, ಸರಳತೆಯಿದೆ, ಪದ್ಯದ ವ್ಯಂಜಕತೆ, ಲಯವಿದೆ. ಮಿಂಚಿದೆ, ಸಿಡಿಲಿದೆ, ಕಾಮನ ಬಿಲ್ಲಿದೆ, ಜೀವನದ ಮೃದು ಕಠೋರ ಅನುಭವದ ತೀವ್ರತೆ-ಇದೆ ಈ ಭಾಷೆಯಲ್ಲಿ. ಒಂದೊಂದು ಕಡೆಗೆ ಶರಣರ ನುಡಿಗಳೇ ಕಾವ್ಯಾನಂದರ ನುಡಿಗಳಾಗಿ ಅದೊಂದು ವಿನೂತನ, ವಿಶಿಷ್ಟವಾದ ಗದ್ಯವಾಗಿ ಹರಿಯುತ್ತಿದೆ. ಶ್ರೀ ಸಾಮಾನ್ಯನಿಂದ ಪಂಡಿತನವರೆಗೆ ರಂಜಿಸುವ ಸಾಮರ್ಥ್ಯವುಳ್ಳ ಈ ಭಾಷೆ, ಈ ಗದ್ಯ ಈ ಶತಮಾನದ ಸಾಹಿತ್ಯದಲ್ಲಿ ಮೈಲಿಗಲ್ಲಾಗಿ ನಿಲ್ಲುತ್ತದೆ. ಶರಣರ ಸಚ್ಛೀಲವನ್ನು ಮೈಗೊಂಡ ಪುರಾಣಿಕರ ಶೀಲ ಶೈಲಿಯಾಗಿ ಅವರ ವ್ಯಕ್ತಿತ್ವಕ್ಕೆ ಕಳಸವಿಟ್ಟಿದೆ. 'Style is the man' ಎಂಬ ಮಾತು ಸತ್ಯವಲ್ಲವೇ? ಗದ್ಯ ಮತ್ತು ಶೈಲಿಗೆ ಒಂದೆರಡು ಉದಾಹರಣೆಗಳು—



"ಮೂರು ಮಗಮಗಿಸುವ ಹೂಗಳ ಮಧ್ಯದಲ್ಲಿ ಬಸವಣ್ಣನೆಂಬ ಹಣ್ಣು ಬಿಟ್ಟಿತು, ಅವರಲ್ಲಿ ಎರಡು ಹೂಗಳಿಂದ-ಗಂಗಾಂಬಿಕೆ ನೀಲಾಂಬಿಕೆಯರೆಂಬ ಹೂಗಳಿಂದ-ಸತೀತ್ವದ ಅಮರ ಸುಗಂಧ ಸೂಸುತ್ತಿದ್ದಿತು; ಮೂರನೆಯ ಹೂವಿನಿಂದ —ನಾಗಲಾಂಬಿಕೆಯೆಂಬ ಹೂವಿನಿಂದ ಅಕ್ಕನ ಅಕ್ಕರತೆಯ ಮಕರಂದ ತೊಟ್ಟಿಕ್ಕುತ್ತಿದ್ದಿತು; ಗಂಗಾಂಬೆ ನೀಲಾಂಬೆಯರು ಬಸವಣ್ಣನವ ಒಲವಿನ ಹೊನಲಿಗೆ ಎರಡು ದಂಡೆಗಳಾಗಿದ್ದರೆ ಅಕ್ಕ ನಾಗಾಂಬೆ ಆ ಹೊನಲಿಗೆ ತಾಯಿಮರಳಿನಂತಿದ್ದಳು. ಈ ಮೂವರಲ್ಲಿ ಒಬ್ಬೊಬ್ಬರಿಗೂ ಒಂದೊಂದು ಮಧುರ ವ್ಯಕ್ತಿತ್ವ"

ಸ್ವಲ್ಪದರಲ್ಲಿಯೇ ಎಂತಹ ಆಳವಾದ, ವ್ಯಾಪಕವಾದ, ಭಾವ ಹಿಡಿದಿಟ್ಟಿದೆ-ಈ ಅಲಂಕಾರಪೂರಿತವಾದ, ಲಯದಿಂದ ಕೂಡಿದ, ನಿರರ್ಗಳವಾಗಿ ಹರಿಯುವ ಗದ್ಯ.

"ನೂರಾರು ವರ್ಷಗಳಾಚೆ-ಹದಿಮೂರು ಹದಿನೈದನೆಯ ಶತಮಾನಗಳ ಮಧ್ಯದಲ್ಲಿ ಎಂದೋ ಒಮ್ಮೆ - ಕೊಳ್ಳೆಗಾಲದಲ್ಲಿರುವ ಶಂಭುಲಿಂಗನ ಬೆಟ್ಟದ ಮೆಟ್ಟಲುಗಳನ್ನೇರುತ್ತಲಿದ್ದ ಭವ್ಯಾತ್ಮನೊಬ್ಬ ಅವನ ಕಾಲುಗಳು ಮೆಟ್ಟಲುಗಳನ್ನೇರುತ್ತಿದ್ದಂತೆ ಅವನ ಮಸ್ತಕದಲ್ಲಿ ಪಲ್ಲವಿಯೊಂದು ಪ್ರತಿಧ್ವನಿಸುತ್ತಲಿತ್ತು-'ಆರು ನಾನೆಂದು ವಿಚಾರಿಸು' ಸಾಕ್ರೆಟೀಸನೆಂದ - 'ನಿನ್ನ ನೀನು ತಿಳಿ'. ಶಿವ ಶರಣರೆಂದರು- 'ತನ್ನ ತಾನರಿದರೆ ಅರಿವೆ ಗುರು' ಈ ವ್ಯಕ್ತಿಯೆಂದಿತು—'ಆರು ನಾನೆಂದು ವಿಚಾರಿಸು!' ಯಾಕೆ ? "ಆರು ನಾನೆಂದು ವಿಚಾರಿಸಿ ತಿಳಿಯೆ ಸಂಸಾರ ಸಾಗರವನುತ್ತರಿಸುವುದರಿಂದೆ ?"

ಮಿಂಚಿನ ಚಾಕಚಕ್ಯತೆಯುಳ್ಳ ಈ ಗದ್ಯ ನಮ್ಮ ತಲೆಯಲ್ಲಿಯೂ ಮಿಂಚನ್ನು ಹುಟ್ಟಿಸುತ್ತದೆ. ಸತ್ವಯುತ, ಶಕ್ತಿಯುತ, ವಿಚಾರಪರಿಪ್ಲುತ ಗದ್ಯಕ್ಕೆ ಇದೊಂದು ಉತ್ತಮ ನಿದರ್ಶನ.

ಐತಿಹಾಸಿಕ ಅಂಶಗಳ ಬಗ್ಗೆ ಒಂದು ಮಾತು: ಪುರಾಣಿಕರು ಶರಣರ ಎಲ್ಲ ಚರಿತ್ರಾಂಶಗಳನ್ನು ಎಲ್ಲ ಕಡೆಗಳಿಂದ ಹೆಕ್ಕಿ, ಕ್ರೋಢೀಕರಿಸಿ ತೂಗಿ ನೋಡಿದ್ದಾರೆ. 'ಇದಮಿತ್ಥಂ' ಎಂದು ಹೇಳಿಲ್ಲವಾದರೂ ಅವರು ತೂಗಿ ನೋಡಿದ ಚರಿತ್ರಾಂಶಗಳನ್ನು ಅಲ್ಲಗಳೆಯುವಂತಿಲ್ಲ. ಅಕ್ಕಮಹಾದೇವಿಯ ಮದುವೆಯ ಬಗ್ಗೆ ಅವರು ಹೇಳುವ ಧಿಟ್ಟತನದ ಮಾತುಗಳನ್ನು ಬರಿಯಮಾತುಗಳಿಂದ ಅಲ್ಲಗಳೆಯಲು ಬರುವದಿಲ್ಲ. ತೀರ ಸಂದಿಗ್ಧತೆಯಿದ್ದ ಕಡೆಗೆ ಎಲ್ಲ ಅಂಶಗಳನ್ನು ನಮ್ಮೆದುರಿಗಿಟ್ಟು ತಮ್ಮ ಅಭಿಪ್ರಾಯವನ್ನು ಸೂಚಿಸುತ್ತಾರೆ. ಭಿನ್ನಾಭಿಪ್ರಾಯಕ್ಕೆ ಎಡೆಯುಂಟು; ಆದರೆ ಅದು ಪೂರ್ವಗ್ರಹದೂಷಿತವಾಗಬಾರದು. ಶರಣರ ಬಗ್ಗೆ ಈ ಗ್ರಂಥದಲ್ಲಿ ನಮಗೆ ಅಧಿಕೃತ ವಿಷಯಗಳು ದೊರಕುತ್ತವೆ. ಒಂದೊಂದು ಚರಿತ್ರೆಯನ್ನೇ ಆಧಾರವಾಗಿಟ್ಟು ಕೊಂಡು ಒಂದೊಂದು ಮಹಾಪ್ರಬಂಧ (Thesis) ವನ್ನು ರಚಿಸುವಷ್ಟು ಸಾಮಗ್ರಿಯಿದೆ-ಇಲ್ಲಿ.

ಲೇಖಕರ ಮುಮ್ಮಾತು, ಹಿಮ್ಮಾತುಗಳು ವಿಚಾರಪೂರ್ಣವಾಗಿವೆ. ಭಾವ, ಭಾಷೆ, ವಸ್ತು, ಶೈಲಿ ವಿಚಾರ-ಎಲ್ಲಾದದಿಂದಲೂ , ಶರಣ ಚರಿತಾಮೃತ' ಈ ಶತಮಾನದ ಮೇರುಕೃತಿಯಾಗಿ ನಿಲ್ಲುತ್ತದೆ. ಜನ ಬದುಕಲಿ ಎಂಬುದೇ ಸಾಹಿತಿಯ ಉದ್ದೇಶ. ನಮ್ಮ ಜನತೆಯ ಬದುಕಿಗೆ ಈ ಮಹಾಗ್ರಂಥ ಹೇಗೆ ಸಹಾಯಕವಾಗುವುದೆಂಬುದನ್ನು ಮುನ್ನುಡಿಕಾರರಾದ ರಾಷ್ಟ್ರಕವಿ ಪುಟ್ಟಪ್ಪನವರ ವಾಣಿಯಲ್ಲಿಯೇ ಕೇಳೋಣ"........ಈ ಕಥನ ಕೃತಿ ನಮ್ಮ ಸಾಮಾನ್ಯ ವರ್ಗಕ್ಕೆ ಆಸೆ, ಧೈರ್ಯ, ಆತ್ಮ ಗೌರವಗಳನ್ನು ದಯಪಾಲಿಸಿ ಅವರನ್ನು ರಾಜಕೀಯ ಪ್ರಜಾಸತ್ತೆಗೆ ಮಾತ್ರವಲ್ಲದೆ ಅಧ್ಯಾತ್ಮಿಕವಾದ ಆತ್ಮಶ್ರೀಯ ಪ್ರಜಾಸತ್ತೆಗೂ ಅಧಿಕಾರಿಗಳನ್ನಾಗಿ ಮಾಡುವುದರಲ್ಲಿ ಸಂದೇಹವಿಲ್ಲ."

ಹತ್ತೆಂಟು ಜನ ವಿದ್ವಾಂಸರು ಕೂಡಿ ಮಾಡುವ ಕೆಲಸವನ್ನು ಶ್ರೀ ಸಿದ್ಧಯ್ಯ ಪುರಾಣಿಕರು ಏಕಾಂಗ ವೀರರಾಗಿ ಮಾಡಿದ್ದಾರೆ; ಮಾಡಿ ಕೃತಾರ್ಥರಾಗಿದ್ದಾರೆ. ಇದು ಅವರ ಮಹಾಮಣಿಹ. ಈ ಮಣಿಹ ಪೂರಯಿಸಲು



ಅವರು ಗಂಧದಂತೆ ಸವೆದು. ದೀಪದೊಲು ಉರಿದು, ಹೂವಿನಂತೆ ಅರಳಿ, ಕಬ್ಬಿನಂತೆ ಹಿಂಡಿ ಹಿಪ್ಪೆಯಾಗಿದ್ದಾರೆ; ನಾಡಿಗೆ ಬೆಳಕು ನೀಡಿದ್ದಾರೆ.

ಈ ಗ್ರಂಥದ ತುಂಬ ಶರಣರ ಚಿತ್ರಗಳಿವೆ. ಅವುಗಳನ್ನು ಬಿಡಿಸಿದವರು ಹೆಸರಾಂತ ಕಲಾವಿದರಾದ ಶ್ರೀ ಎಂ. ಈ. ಗುರು. ಚಿತ್ರಗಳು ಸುಂದರವೂ ಭಾವಪೂರ್ಣವೂ ಆಗಿವೆ. ಮುಖಪುಟ ಆಕರ್ಷಣೀಯವಾಗಿದೆ. ಅಚ್ಚು ಮನೋಹರವಾಗಿದೆ.

ಈ ಗ್ರಂಥ ಪ್ರಕಟನೆಗೆ ಶ್ರೀ ಎ. ಸಿ. ದೇವೇಗೌಡ ಮತ್ತು ಅವರ ಸೋದರರು ಹಣವನ್ನೊದಗಿಸಿದ್ದಾರೆ. ಇಂಥ ಜ್ಞಾನದಾಸೋಹಕ್ಕೆ ಅವರಿತ್ತ ನೆರವಿಗಾಗಿ ಕನ್ನಡ ಸಾರಸ್ವತಲೋಕ ಅವರನ್ನು ಎಷ್ಟು ಕೊಂಡಾಡಿದರೂ ತೀರದು. ವಯಸ್ಕರ ಶಿಕ್ಷಣ ಸಮಿತಿ ಶಿಕ್ಷಣ ಪ್ರಸಾರದ ಜೊತೆಗೆ ಉತ್ತಮ ಗ್ರಂಥಗಳನ್ನು ಪ್ರಕಟಿಸಿ ಸಾಹಿತ್ಯ ಭಾಂಡಾರವನ್ನು ಶ್ರೀಮಂತಗೊಳಿಸುತ್ತಿದೆ. ಇಂಥ ಶ್ರೇಷ್ಠ ಕೃತಿಯನ್ನು ಬೆಳಕಿಗೆ ತಂದುದಕ್ಕಾಗಿ ಆ ಸಮಿತಿಗೆ ಕನ್ನಡ ಓದುಗರ ಪತಿಯಿಂದ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇಂಥ ಗ್ರಂಥಗಳು ಸೋದರ ಭಾಷೆಗೆ ಪರಿವರ್ತಿತವಾದರೆ ಅವರಿಗೂ ಬದುಕಿನಲ್ಲಿ ಬೆಳಕು ಕಾಣಲು ಸಹಾಯವಾಗುವುದು; ಕನ್ನಡ ಸಾಹಿತ್ಯ, ಸಂಸ್ಕೃತಿಗಳ ಹಿರಿಮೆ, ಗರಿಮೆಗಳು ಲೋಕಕ್ಕೆ ಗೊತ್ತಾಗುವುವು. ಬಾಳಿಗೆ ಬೆಳಕು ನೀಡುವ ಇಂಥ ಕೃತಿಯನ್ನು ನಮಗಿತ್ತ ಅನುಭಾವಿ, ಶರಣ, ಹಿರಿಯಕವಿ ಶ್ರೀ ಕಾವ್ಯಾನಂದರಿಗೆ ತುಂಬಿದ ಹೃದಯದಿಂದ ಮಣಿವೆ.

-ಶಾಂತರಸ, ರಾಯಚೂರ

# ನಾಕಂಡ ಸಿದ್ಧಯ್ಯ ಪುರಾಣಿಕರು

ಕನ್ನಡ ನಾಡು ಕವಿಗಳ ನಾಡು, ಸಾಹಿತ್ಯದ ಬೀಡು, ಸಮರಸದ ಆಗರ. ಇಂಥ ಪವಿತ್ರನಾಡಿನಲ್ಲಿ ಅನಂತ ಕವಿಗಳು, ಸಾಹಿತಿಗಳು ಬಾಳಿ ಕನ್ನಡಮ್ಮನ ಕೀರ್ತಿ ಧ್ವಜವನ್ನು ಗಗನಕ್ಕೇರಿಸಿದ್ದಾರೆ. ಕನ್ನಡ ತಾಯಿಯ ಭೂಮಿಯ, ಅನ್ನ, ನೀರುಗಳಲ್ಲಿ ಅದಾವ ಮಹಾಶಕ್ತಿ ಅಡಗಿದೆಯೋ ? ಪಂಪ, ರನ್ನ, ರಾಘವಾಂಕ ಚಾಮರಸ, ಕುವೆಂಪು ಇಂಥಾ ಮಹಾ ಕವಿಗಳು ಬೆಳಗಿ ಬಾಳಿದ್ದಾರೆ. ಬಾಳುತ್ತಿದ್ದಾರೆ. ಚಿರನೂತನ ಚಿರಸ್ಥಾಯಿಯಾಗಿದ್ದಾರೆ ಅವರ ಕಾವ್ಯ ತರಂಗ ಗಗನಗಾಮಿಯಾಗಿದೆ.

ಇಂಥಾ ಮಹಾಕವಿ, ಸಾಹಿತಿಗಳ ಸಾಲಿನಲ್ಲಿ ನಮ್ಮ ಸಿದ್ದಯ್ಯ ಪುರಾಣಿಕರು ಒಬ್ಬರೆಂದರೆ ತಪ್ಪಾಗಲಾರದು. ಅಂಥಾ ಮಹಾಕವಿಯನ್ನು ಕಾಣುವ ಭಾಗ್ಯ ನನಗೊದಗಿ ಬಂದದ್ದು ಬೆಂಗಳೂರಿನಲ್ಲಿ.

"Face is the index of the mind" ಅನ್ನುವ ಹಾಗೆ ಅವರನ್ನು ಕಂಡಾಗಲೇ ಶಾರದೆಯ ಹಿರಿಯ ಪುತ್ರ ಎಂಬ ಕಲ್ಪನೆ ಸಹಜವಾಗಿ ಮೂಡುತ್ತದೆ. ಎಂಥಾ ಸೌಜನ್ಯ, ಎಂಥಾ ಔದಾರ್ಯ, ಎಂಥಾ ವಾತ್ಸಲ್ಯ. ಎಂಥವರೂ ಅವರನ್ನು ಕಂಡಾಗಲೇ ಮಂತ್ರಮುಗ್ಧರಾಗುತ್ತಾರೆ. ಸೌಜನ್ಯ ಔದಾರ್ಯ, ವಾತ್ಸಲ್ಯ ಈ ಮೂರು ಮುಪ್ಪುರಿಗೊಂಡ ಮೂರ್ತಿ ಅವರು. "ಮೃದುವಚನಂಗಳೇ ಸಕಲ ಜಪಂಗಳಯ್ಯಾ" ಎಂಬ ಬಸವಣ್ಣನವರ ನುಡಿ ಅವರ ನರ ನಾಡಿಗಳಲ್ಲಿ ಪ್ರವಹಿಸುತ್ತದೆ ಸರಸ, ಸಜ್ಜನಿಕೆಗಳ ಸಂಗಮದ ಪವಿತ್ರ ಆತ್ಮ ಅವರದು. ಉನ್ನತ ಅಧಿಕಾರ ಸ್ಥಾನದಲ್ಲಿದ್ದರೂ, ಮಹಾ ಸಾಹಿತಿಗಳಾಗಿದ್ದರೂ, ಅಹಂಕಾರ ಕಾಣದು ಮನೆಗೆ ಬಂದ ಅತಿಥಿ ಅಭ್ಯಾಗತರನ್ನು ಕರುಣೆಯಿಂದ ಕಂಡು ಉಪಚರಿಸುವದು, ಮೃದು ಮಧುರ ಮಾತುಗಳಿಂದ ಸಂತುಷ್ಟಗೊಳಿಸುವದು ಅವರ ಹುಟ್ಟುಗುಣವಾಗಿದೆ. ಅಲ್ಲಿ ನೋಡಬೇಕು ಕವಿಯ ಅಂತಃಕರುಣ ಕಳಕಳಿಯನ್ನು. ಅದು ಕಲಿತರೆ ಬರುವಂಥಾದ್ದಲ್ಲ. ಪರಿಸರ, ವಾತಾವರಣ, ಸುಸಂಸ್ಕೃತ ಮನೆತನದಲ್ಲಿ



ಬೆಳೆದು ಬಂದ ವಹಸ್ರೀಯರಿಗೆ ಮೀಸಲು. ಅಂಥಾ ಒಂದು ಸುಸಂಸ್ಕೃತ ಸಾಹಿತಿಗಳ ಕುಟುಂಬದಲ್ಲಿ ಬೆಳೆದು ಬಂದವರು. ಅವರ ತಂದೆ ಪಂ. ಕಲ್ಲಿನಾಥ ಶಾಸ್ತ್ರಿಗಳು ಮಹಾ ಪ್ರಖ್ಯಾತ ಸಾಹಿತಿಗಳು. ಆ ಸಾಹಿತಿಯ ಮಕ್ಕಳಾಗಿ ಬಂದ ಅವರಿಗೆ ಸಾಹಿತ್ಯ, ಕಲೆ, ನಡೆ, ನುಡಿ ರಕ್ತಗತವಾಗಿ ಬಂದಿವೆ.

ಮಾನವನ ಪ್ರತಿಷ್ಠೆ ಬೆಳೆಯಬೇಕಾದರೆ, ಎಲ್ಲರೂ ಪ್ರೇಮಾದರಗಳಿಂದ ಕಾಣಬೇಕಾದರೆ ಅವರಲ್ಲಿ ಅದಾವುದೋ ಶಕ್ತಿ ಅಡಗಿರುತ್ತದೆ. ಅಂತೆಯೇ—

ನರಸ್ಯಾ ಭರಣಂ ರೂಪಂ |
ರೂಪಸ್ಯಾ ಭರಣಂ ಗುಣಂ |
ಗುಣಸ್ಯಾ ಭರಣಂ ಜ್ಞಾನಂ ||

ಅನ್ನುವ ಹಾಗೆ ರೂಪ, ಗುಣ, ಜ್ಞಾನ ಈ ತ್ರಿವೇಣಿ ಸಂಗಮದ ತೀರ್ಥದಲ್ಲಿ ಮಿಂದು ಬಂದ ಮಹಾ ದಿವ್ಯವ್ಯಕ್ತಿಗಳು ಕಾವ್ಯಾನಂದರು. ಈ ಮೂರು ಮಾನವನಿಗೆ ಬೆಳಕಾಗಲಿಕ್ಕೆ ಅವಶ್ಯ ಬೇಕಾದವು. ಇದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ. ಅವರನ್ನು ಕಂಡವರು, ಅವರ ಸಾಹಿತ್ಯವನ್ನು ಓದಿ ರುಚಿನೋಡಿದವರು ಒಪ್ಪಲೇಬೇಕಾದ ಮಾತು. ಈ ದಿವ್ಯ ವ್ಯಕ್ತಿತ್ವವನ್ನು ಹೊಂದಿದ 'ಕಾವ್ಯಾನಂದರು" ಯಾರಿಗೆ ತಾನೆ ಮುದ್ದಿನ ಕವಿಯಾಗಲಿಕ್ಕಿಲ್ಲ?

ಸಿದ್ಧಯ್ಯ ಪುರಾಣಿಕರ ಹೆಸರನ್ನು ಕೇಳದ ಕನ್ನಡಿಗನಿಲ್ಲ. ಅವರ ಸಾಹಿತ್ಯವನ್ನು ಓದದ ಸಹೃದಯಿಗಳಿಲ್ಲ ಎಲ್ಲೆಲ್ಲಿಯೂ ಕನ್ನಡ ನಾಡಿನಲ್ಲಿ ಅವರ ಹೆಸರು ಚಿರಪರಿಚಿತವಾಗಿ ಬಿಟ್ಟಿದೆ. ಶರಣ ಜೀವನ ಸಾಗಿಸುವ ಅವರು "ಶರಣ ಚರಿತಾಮೃತ" ಎಂಬ ಹೆಬ್ಬೊತ್ತಿಗೆಯನ್ನು ಬರೆದು ಕನ್ನಡಿಗರ ಪ್ರೀತಿಗೆ ಪಾತ್ರರಾಗಿದ್ದಾರೆ.

ಅವರ ಕಾವ್ಯಗಂಗೆ ಭೋರ್ಗರೆದು ಪ್ರವಹಿಸುತ್ತದೆ. ಕನ್ನಡ ನಾಡಿನಲ್ಲಿ ಎಲ್ಲೆಲ್ಲಿಯೂ ಹಬ್ಬಿ ಹಬ್ಬದೂಟವನ್ನು ನೀಡುತ್ತದೆ. ರಸಾಮೃತವನ್ನು ಸೂಸುತ್ತದೆ. ಅದನುಂಡು ತೇಗದ ಕನ್ನಡಿಗನಿಲ್ಲ. ಅವರ ಕಾವ್ಯ ಸಂಕಲನಗಳಾದ

ಜಲಪಾತ, ಕರುಣಾಶ್ರಾವಣ, ವಿಕಾಸ ರಾಣಿ, ತುಪ್ಪ ರೊಟ್ಟಿ ಗೇ ಗೇ ಗೇ, ಮಾನಸ ಸರೋವರ ನಮಗೆ ದಿವ್ಯದರ್ಶನವನ್ನು ಕೊಡುತ್ತವೆ. "ತುಪ್ಪ ರೊಟ್ಟಿ ಗೇ ಗೇ ಗೇ" ಮಕ್ಕಳ ಸಲುವಾಗಿ ಬರೆದ ಕವನ ಸಂಗ್ರಹ ಕೇಂದ್ರ ಸರಕಾರದ ಬಹುಮಾನವನ್ನು ಪಡೆದಿದೆ "ಮಾನಸ ಸರೋವರ" ಕವನ ಸಂಗ್ರಹ ರಾಜ್ಯಸರಕಾರದ ಬಹುಮಾನ ಪಡೆದಿದೆ. ಮಕ್ಕಳಿಂದ ಹಿಡಿದು ಹಿರಿಯರವರೆಗೂ ತಮ್ಮ ಜೀವನ ವಿಕಾಸ ಮಾಡಿಕೊಳ್ಳುವ ಕಾವ್ಯಗಳನ್ನು ಬರೆದು, ಚಿಕ್ಕಮಕ್ಕಳಿಂದ ಹಿರಿಯರವರೆಗೂ ಅವರು ಗಾಢಪರಿಚಿತರಾಗಿದ್ದಾರೆ. "ಜಲಪಾತ"ಅವರ ಮತ್ತೊಂದು ಕವನ ಸಂಗ್ರಹ. ಬಹು ಮಾರ್ಮಿಕವಾಗಿದೆ ಹೆಸರಿಗೆ ತಕ್ಕಂತೆ ಧುಮ್ಮಿಕ್ಕಿ ಭೋರ್ಗರೆಯುತ್ತದೆ. ರಮ್ಯ ಮನೋಹರವಾಗಿ ರಸಿಕರಿಗೆ ರಸದೂಟವನ್ನುಣಿಸುತ್ತದೆ. ಸರಸವನ್ನು ನೀಡುತ್ತದೆ. ಇಲ್ಲಿ ಒಂದೆರಡನ್ನು ಉದಾಹರಿಸಿದ್ದರೆ ಉಚಿತನಾಗುತ್ತದೆ.

ನಾನಿಹೆನೊ ಉಪಕಾರಿ ಇಲ್ಲವೆ ಅಪಕಾರಿ
ನನಗೆ ಸಹ ಗೊತ್ತಿಲ್ಲ ನಾನು ಮಾರಿ.
ನನ್ನ ಬರಿ ಜರಿಯದಲೆ ನನ್ನ ವಶಪಡಿಸಿಕೊಳ್ಳಿ,
ಮಾಡಿ ನೋಡಿರಿ ನನ್ನ ಶಕ್ತಿ ಫಲಕಾರಿ. (ಪುಟ ೨ ಜಲಪಾತ)

ಎಂದು ಹೇಳುವ ಅವರ ಕಾವ್ಯಶ್ರೇಣಿ ಎಂಥಾ ದಿವ್ಯ ನಿಜ ಚಿತ್ರವನ್ನು ನಮ್ಮೆದುರಿಗೆ ತಂದು ನಿಲ್ಲಿಸುತ್ತದೆ. ಗಾಂಭೀರ್ಯ ಕವನದ ಜೊತೆಯಲ್ಲಿ ಪ್ರೇಮ ಗೀತೆಗಳಿಗೇನೂ ಕೊರತೆ ಇಲ್ಲ.

'ಸುತ್ತಲಿರುವ ಸದ್ದಿನಲಿ ಸುತ್ತಲಿನ ಗದ್ದಲಲಿ
ನಮ್ಮ ಪಿಸುಮಾತುಗಳನಾಡಿ ನೋಡೋಡಿ
ಬಾಳಹೂದೋಟದಲ್ಲಿ ಜೊತೆಯಾಗಿ ಪುಟಿಯುತಿಹ
ಜೋಡು ಕಾರಂಜಿಯೊಲು ನರ್ತಿಸೋಣ (ಜಲಪಾತ ಪು. ೭೪)
ಮನ್ನಿಸೆನ್ನನು ಚೆನ್ನೆ ಇನ್ನು ಬಡಿವೆನು ರನ್ನೆ
ಎಷ್ಟು ನೋಯಿತೋ ಕಾಣೆ ನಿನ್ನ ಹೂವಿನ ಕೆನ್ನೆ ('' ಪು ೧೦೫)



ಇಂಥಾ ಪ್ರೇಮಗೀತಗಳು ಯಾವ ರಸಿಕರನ್ನು ಸೆರೆಹಿಡಿಯಲಾರವು? ಒಂದೆಡೆ ಗಾಂಭೀರ್ಯ, ಮತ್ತೊಂದೆಡೆ,ಪ್ರೇಮ ಗುಲ್ಲುಗಳ ಚೆಲ್ಲಾಟ ನವರಸವನ್ನು ನೀಡುತ್ತದೆ. ಹೀಗ ಕವಿಯಾಗಿ ಅವರ ಕೀರ್ತಿ ಹಬ್ಬಿದೆ.

ನಾಟಕಕಾರರಾಗಿ ಅವರು ನಮ್ಮೆದುರಿಗೆ ವಿರಾಜಿಸುತ್ತಾರೆ. ಅವರ ನಾಟಕಗಳಾದ ಆತ್ಮಾರ್ಪಣೆ, ರಜತರೇಖೆ, ಭಾರತವೀರ, ಸಾಹಿತ್ಯದಲ್ಲಿ ಒಳ್ಳೇ ಸ್ಥಾನಗಳನ್ನು ಗಳಿಸಿವೆಯಲ್ಲವೇ ಭಾರತವೀರ ಮತ್ತು ರಜತರೇಖೆ ನಾಟಕಗಳು ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳಾಗಿವೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೂ ಅವರ ಸಾಹಿತ್ಯ ಓದುವ ಭಾಗ್ಯ ಕಂಡದ್ದು ಅವರ ಪುಣ್ಯವೆಂದೇ ಹೇಳಬೇಕು.

ಇನ್ನು ಕಥೆಗಾರರಾಗಿಯೂ ಅವರು ಕಥಾಮಂಜರಿ, ತುಷಾರಹಾರ ಎಂಬ ಕಥೆಯ ಸಂಕಲನಗಳನ್ನು ಬರೆದಿದ್ದಾರೆ. ಅವು ತುಂಬು ಸ್ವಾರಸ್ಯದಿಂದ ಓದುಗರನ್ನು ಮುಗ್ಧ ಮಾಡುತ್ತವೆ.

ಕಾದಂಬರಿಕಾರರಾಗಿ "ತ್ರಿಭುವನಮಲ್ಲ" ಎಂಬ ಬೃಹತ್ ಕಾದಂಬರಿಕಾರರಾಗಿ ತಮ್ಮ ಸಾಹಿತ್ಯ ಸುಗಂಧವನ್ನು ಸರ್ವದಿಕ್ಕುಗಳಲ್ಲಿ ಪಸರಿಸಿದ್ದಾರೆ, ಪಸರಿಸುತ್ತಲಿದ್ದಾರೆ. ಅವರ ಸಾಹಿತ್ಯ ದುಂದುಭಿ ನಾಡಿನ ತುಂಬೆಲ್ಲ ಮೊಳಗಿ ಪ್ರತಿ ಧ್ವನಿಸುತ್ತದೆ. ಕಾವ್ಯ ಕುಸುಮ ಪರಿಮಳಿಸುತ್ತವೆ. ಘಮಘಮಿಸುತ್ತದೆ. ತಮ್ಮ ಕಾವ್ಯ ಕಲಾ ಕುಂಚಿನಿಂದ ಕನ್ನಡತಿಯನ್ನು ಶೃಂಗರಿಸಿದ್ದಾರೆ, ಶ್ರೀಮಂತಳನ್ನಾಗಿ ಮಾಡಿದ್ದಾರೆ. ಇಂಥಾ ಮಹಾ ಸಾಹಿತಿ ಸಿದ್ಧಯ್ಯ ಪುರಾಣಿಕರ ತುಂಬು ಜೀವನವು ಮಹತ್ವದ್ದಾಗಿದೆ. ಅವರ ನಾಲ್ಕು ಮಕ್ಕಳು ಅವರ ಮನೆ ತುಂಬಿದ್ದಾರೆ. ತಂದೆಯ ಸೌಜನ್ಯ, ಸೌಹಾರ್ದಗಳು ಅವರಲ್ಲಿ ರಕ್ತಗತವಾಗಿ ತುಂಬಿವೆ.

ಈ ಮಹಾ ಸಾಹಿತಿಯ ಜೀವನವು ಇನ್ನೂ ಭವ್ಯವಾಗಿ, ಕನ್ನಡ ಸಾಹಿತ್ಯವನ್ನು ಹೆಚ್ಚು ಫಲವತ್ತಾಗಿ ಮಾಡುವ ಸಾಮರ್ಥ್ಯವನ್ನು ಆ ಜಗದೀಶ್ವರನು ಕೊಡಲೆಂದು ಹಾರೈಸೋಣ.

— **ಎಸ್. ಜಿ. ಹಿರೇಮಠ** ಬಿ.ಎ. ರಾಯಚೂರ

# ರಜತ ರೇಖೆ (ರೇಡಿಯೋ ನಾಟಕ)

ಕನ್ನಡದ ಆದಿಕವಿ ಪಂಪ, ಸತ್ತವರ ಕತೆ ಬರೆಯದ ಚಾಮರಸ,
ಮಹಾಕವಿ ಕಾಳಿದಾಸ, ಭಕ್ತಕವಿ ಹರಿಹರ, ಪಾಶ್ಚಿಮಾತ್ಯ ವೈಚಾರಿಕ
ನಾಟಕಕಾರ ಬರ್ನಾರ್ಡ್ ಷಾ ನವೋದಯ ಸಾಹಿತ್ಯದ ಜನಕ ಶ್ರೀ ಶ್ರೀ
ಇವರೆಲ್ಲರ ರಸ ಪ್ರಸಂಗಗಳನ್ನು, ಸುಂದರ ಸೃಷ್ಟಿ ಸೊಬಗನ್ನು ಹಿನ್ನೆಲೆ
ಯಾಗಿಟ್ಟುಕೊಂಡು ಅವುಗಳಿಗೆಲ್ಲ 'ರಜತ ರೇಖೆಯನ್ನು' ಲೇಪಿಸಿ, ಕನ್ನಡ
ಸಾಹಿತ್ಯದ ಹೊಸತನಕ್ಕೆ ಅನುವು ಮಾಡಿಕೊಟ್ಟ ಶ್ರೀ ಕಾವ್ಯಾನಂದರ
ಗೀತರೂಪ ರೆಡಿಯೋ ನಾಟಕಗಳ ಸಂಕಲನ ರಜತರೇಖೆ ಒಂದು ಸುಂದರ
ಹೂವಿನ ಹಂದರ. ನಿಸರ್ಗದ ನೈಜ ಹಂದರದ ಹತ್ತಿರ ವಾಲುತ್ತಿದೆ. ಪ್ರಕೃತಿ
ವೈಚಿತ್ರ್ಯ ಸುಂದರತಮವಾಗಿದ್ದರೆ ಕವಿಯ ಹೃದಯ ನಿಸರ್ಗದಂತಹ ಅಪಾರ
ಚಿತ್ರಗಳ ಕೂಟದಿಂದ ತುಂಬಿದೆ. ಅಂತಹ ಅಪಾರ ಅನುಭವವನ್ನು ಈ
ರೀತಿ ತಮ್ಮದೇ ಆದ ನೈಜ ಸುಂದರ ಶೈಲಿಯಿಂದ 'ಮಧುಮಹೋತ್ಸವ'ದ
ಸುಂದರ ದೃಶ್ಯವನ್ನೇ ಓದುಗರ ಮುಂದೆ ತಂದಿಟ್ಟದ್ದಾರೆ.

ಜೀವನದ ಮೌಲ್ಯ ಸಂಕೇತದಂತಿರುವ 'ಮೋಹನಮಂತ್ರ' ಪ್ರಶ್ನೋ
ತ್ತರವಾಗಿರದೆ, ಸಪ್ರಾಮಾಣಿಕ ತಾತ್ವಿಕ ಬಿಡಿಗಾಳಾಗಿದೆ. ಮಧುಕರ
ಸಮಾಜ ಭೂತನಾಗಿ ಪರಿಣಮಿಸಿದರೂ, ಕೊನೆಗೆ ಮೋಹನ ಮಂತ್ರಕ್ಕೆ
ಮೋಹಗೊಂಡು ಶರಣನಾಗಿದ್ದಾನೆ. ಮಾಯೆ ಬೆಂಬತ್ತಿದ ದೈವಕ್ಕೆ ಅವಳ
ದೈವವೇ ಮಾಯವಾಗಿ ಕಾಡಿ; ಸೋತ ಮಾಯೆ, ಮಾಯೆ ಗೆದ್ದ ದೈವ
ವಿಜಯ ಪತಾಕೆ. ಸಾತ್ವಿಕ ಮಾಯೆಗೆ ದೈವದ ಸೋಲ. ಸಾಹಿತಿಯ ಚಕ್ಷು
ನೋಡಲು ಸಮಾಜಕ್ಕೆ ಆಂತರಿಕ ಚಕ್ಷು ಅವಶ್ಯ. ಮೇಲ್ನೋಟದ ಅರ್ಥ
ವ್ಯರ್ಥವೆಂದರಿಯದೆ, ಹಿಂದಣ ಸೂಚ್ಯಾರ್ಥ ನೋಡಬೇಕು. ಅದು ವ
'ಷಾ' ನಿಗೆ ಸಲ್ಲಿಸುವ ಶ್ರದ್ಧಾಂಜಲಿ.

ನಿಸರ್ಗದ ನೀರ ದೇವತೆಗಳ ಕಳವಳಕಾರಕ ಸಂಗಮ ಯಾರ ಎ



ಯನ್ನು ಭೇದಿಸದಿರದು. ಅವರು ಪಡುವ ಯಾತನೆ ಕಂಡು ಮರುಗಿದ ಮನ ಕೊನೆಗೆ ಲೋಕ ಕಲ್ಯಾಣದ ಅರಿವು ಅವರಿಗೆ ತಿಳಿದಾಗ ಸಂತೋಷಪಡು ವದು. ಕವಿಯ ನೂತನ ಕಾವ್ಯ ಶ್ರೀಗೆ ತಲೆದೂಗದಿರೆವು. "ದುಃಖಸೇತುವೆ" ಓದಿದಂತೆ ಕಣ್ಣಾಂಬರದಲ್ಲಿ ನೀರು ಕೆನೆಗಟ್ಟಿ, ತುಂತುರವನಿಯಾಗಿ ಬೀಳು ತ್ತಿದ್ದಾಗ್ಯೂ, ಶರೀರದ ರೋಮ ರೋಮ ನಾಡಿಗಳಲ್ಲಿ ದುಃಖಸ್ಪಂದನವಾ ಗುವದು. ಗಿರಿಜೆಗೆ ಹರನ ಕರುಣೆಯಿಂದ ಗೆಲುವಾದರೆ, ಲೋಕಕ್ಕೆ ಅವ ರಿಬ್ಬರ ಪ್ರೇಮ ಸಂಗಮದಿಂದ ಗೆಲುವಾಯಿತು. ಹರಿಹರನ ಭಾವವೇಶ ಕವಿಯಲ್ಲಿ ಇಣುಕಿದರೂ, ತನ್ನದೇ ಆದ ಧ್ವನಿ ಮಾಧುರ್ಯತೆ ಕಾವ್ಯ ಶ್ರೀಯಲ್ಲಿ ಧ್ವನಿತವಾಗುತ್ತಿದೆ.

ಪ್ರಕೃತಿಯ ಉನ್ನತಾಂಗಣದಲ್ಲಿ ಗುಡುಗಗಳ ಗರ್ಜನೆಯಲ್ಲಿ 'ರಜ- ತರೇಖೆ' ಕಂಡ ಕವಿ, ಪ್ರಕೃತಿಯ ಮಡಿಲಲ್ಲಿ ರಜತ ರೇಖೆಯನ್ನು ಗುರುತಿಸಿ ಓದುಗರ ಹೃದಯಾಕಾಶದಲ್ಲಿ ಮಿಂಚುವಂತೆ ಮಾಡಿದ್ದಾನೆ. ರಜತರೇಖೆ ಕನ್ನಡದಲ್ಲಿ ಒಂದು ಅಪೂರ್ವ ರೇಡಿಯೋ ನಾಟಕ ಸಂಕಲನ.

**—ಎಂ. ಎಂ. ಚ್ಯಾಲಾಳ.**

# ಭಾರತ ವೀರ

ಕ್ರಿ. ಶ. ೧೯೬೨ನೆಯ ಅಕ್ಟೋಬರದಲ್ಲಿ ಚೀನಿಯರು ನಮ್ಮ ದೇಶದ ಉತ್ತರ ಗಡಿಯಲ್ಲಿ ಆಕ್ರಮಣ ಮಾಡಿದ ನಂತರ "ಭಾರತವೀರ" ಎಂಬ ಐತಿಹಾಸಿಕ ನಾಟಕವು ಕನ್ನಡ ನಾಡಿನ ಪ್ರಸಿದ್ಧ ಸಾಹಿತಿಗಳಾದ ಶ್ರೀ ಸಿದ್ಧಯ್ಯ ಪುರಾಣಿಕ (ಕಾವ್ಯಾನಂದ) ರಿಂದ ರಚಿಸಲ್ಪಟ್ಟಿತು. ಶ್ರೀ-ಸಿದ್ಧಯ್ಯನವರು ಕಟ್ಟಾದೇಶಾಭಿಮಾನಿಗಳು. ಪರಕೀಯರ ದಾಳಿಗೆ ಮೇ-ಲಿಂದ ಮೇಲೆ ತುತ್ತಾಗುತ್ತ ಬಂದ ಭಾರತದ ಪರಿಸ್ಥಿತಿಯನ್ನು ಕಂಡು ಮನದೊಳಗೆ ನೊಂದುಕೊಂಡವರಲ್ಲಿ ಇವರೂ ಒಬ್ಬರು. ಚೀನಿಯರ ವಿಶ್ವಾಸಘಾತದ ಆಕ್ರಮಣವನ್ನು ಎದುರಿಸಲು ಭಾರತೀಯರಲ್ಲಿ ಸಾಹಸೋತ್ಸಾಹಗಳು ಹೆಚ್ಚಿ, ಐಕ್ಯತೆಯು ಒಡಮೂಡಿ, ರಾಷ್ಟ್ರ ರಕ್ಷಣೆಯ ಅರಿವುಂಟಾಗಗಲೆಂಬ ಹಿರಿಯ ಹಂಬಲದಿಂದ ತನ್ನ ಲೆಕ್ಕಣಿಕೆಯನ್ನು ಎತ್ತಿದ ಶೂರ ಸಾಹಿತಿಗಳಿವರು. ಪ್ರಸ್ತುತ ಸಂದರ್ಭಕ್ಕೆ ಹೊಂದಿಕೆಯಾಗುವಂಥ ಒಂದು ಐತಿಹಾಸಿಕ ಘಟನೆಯನ್ನು ಆರು ತಿಂಗಳ ವರೆಗೆ ಶೋಧಮಾಡಿ, ನಾಟಕದ ಕಥಾವಸ್ತುವನ್ನು ಲೇಖಕರು ಆರಿಸಿಕೊಂಡಿದ್ದಾರೆ. ಈ ಕಥಾವಸ್ತು ಹೂಣದೊರೆ ಮಿಹಿರಕುಲನಿಗೆ ಸಂಬಂಧಿಸಿದ್ದಾಗಿದೆ. ಈತನು ಕ್ರೂರನೂ, ದುಷ್ಟಹೇತುವುಳ್ಳವನೂ ರಕ್ತಪಿಪಾಸಿಯೂ, ವಿಶ್ವಾಸಘಾತಕನೂ ಆಗಿದ್ದನು. ಸಂಪದ್ಭರಿತವಾದ ಭಾರತವನ್ನು ಕಂಡು ಒಳಗೊಳಗೆ ಕುದಿದು ಸಮಯ ಸಾಧಿಸಿ ಆಗಾಗ ಭಾರತ ಮೇಲೆ ಆಕ್ರಮಣ ಮಾಡುತ್ತಿದ್ದನು. ಶ್ರೀ ಸಿದ್ಧಯ್ಯನವರು ಹೂಣದೊರೆ ಮಿಹಿರಕುಲನನ್ನು ಈಗಿನ ಚೀನಾದ ನಾಯಕ "ಚೌ.ಎನ್-ಲಾಯ್" ನಿಗೆ ಹೋಲಿಕೆಯಾಗುವಂತೆ ನಾಟಕ ರಚಿಸಿದ್ದಾರೆ. ಆ ಕಾಲಕ್ಕೆ ಭಾರತದಲ್ಲಿ ಗುಪ್ತ ಸಾಮ್ರಾಟನಾದ ಬಾಲಾದಿತ್ಯನು ರಾಜ್ಯವಾಳುತ್ತಿದ್ದನು. ಮಗಧ ದೇಶದ ಈ ಅರಸನು ಮಿಹಿರನನ್ನು ಎರಡು ಸಲ ಸೋಲಿಸಿದ್ದಾನೆ. ಅವನ ಕೊನೆಯ ದಾಳಿಯನ್ನು ಬಲವಾಗಿ ಎದುರಿಸಿ ಮಿಹಿರಕುಲನನ್ನು ಬೆನ್ನಟ್ಟುತ್ತಾನೆ. ಮಿಹಿರಕುಲನು ಹೆದರಿ ಅರಣ್ಯದಲ್ಲಿ ಅಡಗಿಕೊಳ್ಳುತ್ತಾನೆ. ಬಾಲಾದಿತ್ಯನ ಸೈನಿಕರು ಆರಣ್ಯಕ್ಕೆ ಬೆಂಕಿ ಇಟ್ಟು



ಅವನನ್ನು ಸುಟ್ಟು ಬಿಡುತ್ತಾರೆ. ನಂತರ ಆಶ್ರಯ ಬಯಸಿ ಬಂದ ಮಿಹಿರಕುಲನ ಮಗ ಬಕನಿಗೆ ರಕ್ಷಣೆ ನೀಡಿದ ಪ್ರಸಂಗವು ಭಾರತೀಯ ಸಂಸ್ಕೃತಿಯ ಮೇಲ್ಮೆಯನ್ನು ಎತ್ತಿತೋರಿಸುವಂತೆ ಶ್ರೀ ಸಿದ್ಧಯ್ಯನವರು ನಿಚ್ಚಳವಾಗಿ ಚಿತ್ರಿಸಿದ್ದಾರೆ.

'ಭಾರತವೀರ, ಐತಿಹಾಸಿಕ ನಾಟಕದಲ್ಲಿ ಬಾಲಾದಿತ್ಯನು ನಾಯಕನಾಗಿಯೂ, ಮಿಹಿರಕುಲನು ಖಳನಾಯಕನಾಗಿಯೂ ಕಾಣಿಸಿಕೊಳ್ಳುತ್ತಾರೆ. ಇವೆರಡು ಪಾತ್ರಗಳಲ್ಲದೆ ರಾಜಗುರು 'ವಸುಬಂಧು' ಪ್ರಮುಖ ಪಾತ್ರವಹಿಸಿದ್ದಾನೆ. ಶ್ರೀ ಸಿದ್ಧಯ್ಯನವರು ಮುಖ್ಯ ಪಾತ್ರಗಳ ಜೊತೆಗೆ ಅವಶ್ಯಕವಾದ ಹದಿನಾಲ್ಕು ಪೋಷಕ ಪಾತ್ರಗಳನ್ನು ರೂಪಿಸಿಕೊಂಡು ನಾಟಕವು ಪರಿಣಾಮಕಾರಿಯಾಗುವಂತಾಗಲು ಪ್ರಯತ್ನಿಸಿದ್ದಾರೆ. ಆದರೆ ಕೆಲವು ವಿಮರ್ಶಕರ ದೃಷ್ಟಿಯಲ್ಲಿ ಈ ಪೋಷಕ ಪಾತ್ರಗಳ ನಿರ್ಮಾಣ ಅಷ್ಟೊಂದು ಉಚಿತವಾಗಿಲ್ಲವೆಂದು ಕಂಡು ಬರುತ್ತದೆ.

ಹೂಣರಸು ಮಿಹಿರಕುಲನ ಪಾತ್ರವನ್ನು ನಾಟಕಕಾರರು ಇತಿಹಾಸದಲ್ಲಿದ್ದಂತೆ ವಸ್ತುಸ್ಥಿತಿಯನ್ನು ಚಿತ್ರಿಸುವಲ್ಲಿ ತುಂಬಾ ಯಶಸ್ವಿಯಾಗಿದ್ದಾರೆ. ಅವನೊಬ್ಬ ಕ್ರೂರಿಯಾಗಿದ್ದನಲ್ಲದೆ, ದುಷ್ಟ, ಕಪಟ, ಮೋಸಗಾರ ಹಾಗೂ ವಿಶ್ವಾಸಘಾತಕನಾಗಿದ್ದನೆಂಬುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾರೆ.

ಈ ನಾಟಕದಲ್ಲಿ ಗುಪ್ತ ಸಾಮ್ರಾಟ ಬಾಲಾದಿತ್ಯನ ಪಾತ್ರವು ವಿಶೇಷ ಪ್ರಧಾನ್ಯತೆಯನ್ನು ಪಡೆದಿದೆ. ದೇಶದ ರಕ್ಷಣೆಯಲ್ಲಿ ಈತನ ಸಾಹಸೋತ್ಸಾಹಗಳು ಪ್ರತಿಯೊಬ್ಬ ಭಾರತಿಯನು ಮೆಚ್ಚುವಂತಿವೆ, ಅನುಕರಣ ಮಾಡುವಂತಿವೆ. ಜನತೆಯಲ್ಲಿ ಜಾಗೃತೆಯನ್ನುಂಟುಮಾಡಲು ಶ್ರೀ ಸಿದ್ಧಯ್ಯನವರು ಬಾಲಾದಿತ್ಯ, ಮಿತ್ರಾದೇವಿ, ರಾಜಲಕ್ಷ್ಮಿಯರ ಬಾಯಿಯಿಂದ ವೀರೋಚಿತ ಹಾಗೂ ರಾಷ್ಟ್ರಾಭಿಮಾನದ ಮಾತುಗಳನ್ನು ಕಾಲ ಕಾಲಕ್ಕೆ ಹೇಳಿಸಿದ್ದಾರೆ. ದೇಶದ ಸ್ವಾತಂತ್ರ್ಯ ರಕ್ಷಣಾ ಕಾರ್ಯದಲ್ಲಿ ಬೇಸಾಯಗಾರ, ಕಮ್ಮಾರ, ಕೂಲಿಕಾರ, ಗೃಹಿಣಿ ಹಾಗೂ ಸಂನ್ಯಾಸಿಗಳು ಟೊಂಕಕಟ್ಟಿ ನಿಂತು; ತನು, ಮನ, ಧನದಿಂದ ಸೇವೆ ಸಲ್ಲಿಸುವ ದೃಶ್ಯಗಳು ಪ್ರಸ್ತುತ ಪರಿಸ್ಥಿತಿಗೆ ಸಮಯೋಚಿತವಾಗಿವೆ.

ಬೌದ್ಧಗುರು ವಸು ಬಂಧುವಿನ ಪಾತ್ರಕ್ಕೆ ಶ್ರೀ ಸಿದ್ಧಯ್ಯನವರು ಹೆಚ್ಚಿನ ಕಳೆಕೊಟ್ಟು ಕಾಲಕಾಲಕ್ಕೆ ಆತನ ದರ್ಶನವನ್ನು ಪ್ರೇಕ್ಷಕರಿಗೆ ಮಾಡಿಸಿದ್ದಾರೆ. ಈ ಪಾತ್ರವು ನಾಟಕಕಾರರ ಕಲ್ಪನೆಯದಾಗಿದೆ. "ಶಿವಾಜಿಗೆ ರಾಮದಾಸರಂತೆ, ಮೌರ್ಯ ಚಂದ್ರಗುಪ್ತನಿಗೆ ಆರ್ಯ ಚಾಣಕ್ಯನಂತೆ, ಹುಕ್ಕಬುಕ್ಕರಿಗೆ ಶ್ರೀ ವಿದ್ಯಾರಣ್ಯರಂತೆ, ಬಾಲಾದಿತ್ಯನಿಗೆ ವಸು ಬಂಧುವುನನ್ನು ನಾಟಕಕಾರರು ರಾಜಗುರುವನ್ನಾಗಿ ಕಲ್ಪಿಸಿದ್ದಾರೆ." ಈ ರಾಜಗುರುವು ಬಾಲಾದಿತ್ಯನಿಗೆ ಕಾಲಕಾಲಕ್ಕೆ ಸ್ಫೂರ್ತಿ ನೀಡಿ ರಾಷ್ಟ್ರ ರಕ್ಷಣೆಯ ಕಾರ್ಯ ಮಾಡಿದ್ದಾರೆ.

ನಾಟಕಕಾರರು ಭಾರತೀಯ ಸಂಸ್ಕೃತಿಯ ಅಂಗಗಳಾದ ಕರುಣೆ, ಔದಾರ್ಯ, ಅಹಿಂಸೆ, ಸತ್ಯ, ಸಹಾನುಭೂತಿಗಳು ಭಾರತೀಯರಲ್ಲಿ ಪ್ರಾಚೀನ ಕಾಲದಿಂದಲೂ ಅನೂಚಾನವಾಗಿ ಬೆಳೆದುಬಂದ ರೀತಿಯನ್ನು ವಸು ಬಂಧುವಿನ ಮುಖಾಂತರ ಓದುಗರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. "ವೈರದಿಂದ ವೈರದ ಶಮನವಿಲ್ಲ; ಅವೈರದಿಂದಲೇ ವೈರದ ಶಮನ ಸಾಧ್ಯ." ಎಂದು ಬೋಧಿಸುವ ವಸು ಬಂಧುವಿನ ಉಪದೇಶವು ಭಾರತದ ಇಂದಿನ ಧರ್ಮ ನೀತಿಗೆ ದಾರಿದೀಪವಾಗಿದೆ ಈ ರಾಜಗುರುವು ಕೊನೆಯಲ್ಲಿ ಸಹಾಯವನ್ನು ಬೇಡಿಬಂದ ಮಿಹಿರಕುಲನ ಮಗ "ಬಕ" ನನ್ನು ರಕ್ಷಿಸುವ ಭಾರ ಬಾಲಾದಿತ್ಯನಿಗೆ ವಹಿಸಿ ಕೊಡುತ್ತಾನೆ. ಆಶ್ರಯ ಬೇಡಿಬಂದವರನ್ನು ರಕ್ಷಿಸುವದು ಪ್ರತಿಯೊಬ್ಬ ಭಾರತೀಯನ ಧರ್ಮವಾಗಿದೆ. ಇದರಿಂದ ಭಾರತೀಯರಲ್ಲಿದ್ದ ಸ್ನೇಹ ಹಾಗೂ ಸಮನ್ವಯ ಭಾವಗಳು ವಿಶ್ವಕ್ಕೆ ಆದರ್ಶ ಪಾಠಗಳಾಗುವವೆಂಬದನ್ನು ಶ್ರೀ ಸಿದ್ಧಯ್ಯನವರು ಈ ನಾಟಕದಲ್ಲಿ ವಸು ಬಂಧುವಿನಿಂದ ಉಪದೇಶಿಸಿದ್ದಾರೆ.

"ಈ ನಾಟಕವು ಮುಖ್ಯವಾಗಿ ರಾಷ್ಟ್ರ ರಕ್ಷಣೆಯ ಪ್ರಯತ್ನಗಳಿಗೆ ಪ್ರಚೋದನೆ ನೀಡುವಲ್ಲಿ ನೆರವಾಗಲೆಂಬ ಉದ್ದೇಶದಿಂದ ಶ್ರೀ ಸಿದ್ಧಯ್ಯ ಪುರಾಣಿಕರು ಬರೆದಿದ್ದಾರೆಂದು" ಅವರು ಬರೆದ ಮೊದಲ ಮಾತಿನಿಂದ ತಿಳಿದು ಬರುತ್ತದೆ. ಇಲ್ಲಿ ಲೇಖಕರ ಉದ್ದೇಶ ತುಂಬಾ ಸಫಲತೆಗೊಂಡಿದೆ ಎಂದು ಧೈರ್ಯವಾಗಿ ಹೇಳಬಹುದು. ಸ್ವಾತಂತ್ರ್ಯದ ಕಲ್ಪನೆ, ಭಾವೈಕ್ಯತೆ



ವೀರೋಚಿತ ಸ್ವಾಭಿಮಾನ ಓದುಗರಲ್ಲಿ ಸಹಜವಾಗಿ ಮೂಡಿ ಬರುವಂತೆ ನಾಟಕಕಾರರು ಸಾಕಷ್ಟು ಶ್ರಮಿಸಿದ್ದಾರೆ.

ಒಟ್ಟಿನಲ್ಲಿ ಈ ನಾಟಕವು ಐತಿಹಾಸಿಕ ಸತ್ಯತೆಯಿಂದ ಒಡಗೂಡಿದೆ. ಉದ್ದೇಶ ಉತ್ತಮವಾಗಿದೆ. ಕಥಾವಸ್ತು ಪ್ರಸ್ತುತ ಸಂದರ್ಭಕ್ಕೆ ಉಚಿತವಾಗಿದೆ. ಪಾತ್ರಗಳ ಹೊಂದಾಣಿಕೆ ಸರಿಯಾಗಿದೆ ಎಂದೆನಿಸುತ್ತಿದೆ. ನಾಟಕದ ಹೆಸರು 'ಭಾರತವೀರ' ಯಥಾ ಯೋಗ್ಯವಾಗಿದೆ. ಆದರೆ ಲೇಖಕರು ನಾಟಕ ರಚಿಸುವಲ್ಲಿ ತಮ್ಮದೆ ಆದ ನೂತನ ತಂತ್ರವನ್ನು ತರಲು ಹೊರಟಾಗ ಅಲ್ಲಲ್ಲಿ ಎಡವಿದ್ದಾರೆಂದು ಕೆಲವು ವಿಮರ್ಶಕರ ಅಭಿಪ್ರಾಯವಾಗಿದೆ ಅವರ ಅಭಿಪ್ರಾಯ ಕೊಂಚಮಟ್ಟಿಗೆ ಸರಿ ಎನಿಸುತ್ತಿದೆ. ಮೂರು ಅಂಕುಗಳುಳ್ಳ ಈ ನಾಟಕದಲ್ಲಿ ಮೂವತ್ಮೂರು ದೃಶ್ಯಗಳಿರುತ್ತವೆ. ಇದರಿಂದ ಪಡದೆಯ ಏರಿಳಿತಗಳು ಕ್ಷಣ ಕ್ಷಣಕ್ಕೆ ಆಗುವದರಿಂದ ಪ್ರೇಕ್ಷಕರಿಗೆ ಬೇಸರ ಬರುವದು ಸಹಜ. ಹೀಗೆ ಆಗುವದರಿಂದ ನಾಟಕವು ನಿರಸವಾಗಬಹುದೇನೋ ಎಂದೆನಿಸುತ್ತಿದೆ.

ಇದೊಂದು ವೀರರಸ ಪ್ರಧಾನವಾದ ನಾಟಕವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಶ್ರೀ ಸಿದ್ಧಯ್ಯ ಪುರಾಣಿಕರು ಈ ನಾಟಕದ ಮುಖಾಂತರ ಸ್ವಾತಂತ್ರ್ಯಪ್ರೇಮವುಳ್ಳ ಐತಿಹಾಸಿಕ ಘಟನೆಯಿಂದೊಡಗೂಡಿದ ಚಿತ್ರವನ್ನು ಓದುಗರ ಎದುರಿಗೆ ಇಟ್ಟು ಜನಜಾಗೃತಿ ಮಾಡಿದ್ದಾರೆ. ಇವರಂತೆ ಕನ್ನಡ ನಾಡಿನ ಸಾಹಿತಿಗಳು ಶ್ರಮಿಸಿದಲ್ಲಿ ದೇಶದ ಋಣ ತೀರಿಸಿದಂತಾಗುತ್ತದೆಂದು ಹೇಳಬಹುದು.

ನ. ದ. ಹಕೀಮ

# ಕಾವ್ಯಶ್ರೀ ಕಾವ್ಯಾನಂದ

ಕವಿಕುಲದ ಪೀಳಿಗೆಯೊಳೊಗೆವ ಶ್ರೀ ಕಲ್ಲಿನಾಥನ ಕಂದ,
ಕಾವ್ಯೋಪಾಸಕ 'ವಿದ್ಯಾರತ್ನ' 'ಕಾವ್ಯ ಶ್ರೀ ಕಾವ್ಯಾನಂದ'
ಕನ್ನಡದ ಮುದ್ದು ಪಿಕವಾಗಿ ಕುಕುಲಿತಿಹೆ ತುಂಬಿ ಕಾವ್ಯ ರಸಾನಂದ
ಆನಂದವನೆ ನೀಡಿ ಸಾನಂದ ಪಡುತಿರುವೆ ಬೀರಿ ದಿವ್ಯಾನಂದ,

ನುಡಿಯಿಂಚರದ ಶ್ರೀಕರ ಶ್ರೀಕಾರದ ರಸ ಸುಂದರ ಸೃಷ್ಟಿ,
ಭಾವೋನ್ಮಾದದ ಸುರಚಿರ ಚಂದಿರ ತಂಬೆಳಗಿನ ವೃಷ್ಟಿ,
ಮನಮೋಹಕ 'ಮಾನಸ ರೋವರ'ದಿ ಮಿಂದು ವ್ಯಷ್ಟಿ-ಸಮಷ್ಟಿ,
ತಣಿಯುತಿವೆ ಮಣಿಯುತಿವೆ ಪಡೆದು ಚಿರ ಸಂತುಷ್ಟಿ

ನಯವಿನಯ ಸೌಜನ್ಯ ಸಾಕಾರ ಮೂರ್ತಿ ಬೆಳಗುತಿಹೆ ದೀಪಾರ್ತಿ,
ಭಾವ ಬಿಳಿ ಪಳಕು ಹೃದಯ ತಿಳಿಗೊಳ ಪೂರ್ತಿ ಎತ್ತಿರುವೆ ದೀಪಾರ್ತಿ,
ಕನ್ನಡಾಂಬೆಯು ಕಣ್ಮಣಿ ನೀ ಭಾರತಾಂಬೆಯು ಕೀರ್ತಿ;
ಚೆನ್ನುಡಿಯ ನೈವೇದ್ಯ ನುಡಿದಾಯಿಗರಿಸುತಿಹೆ ಕರೆದು ತವಸ್ಫೂರ್ತಿ,

ರಮ್ಯ ಸುರಮ್ಯವದು ಕಣಾ ನಿಜದಿ"ಕರುಣಾ ಶ್ರಾವಣ"
ರಸಿಕ ರಂಜನಧಾರೆ 'ಜಲಪಾತ' ಭುವನ ಕವನ ಸಮ್ಮೋಹನ,
ಉಕ್ಕಂದದಲಿ ಚಕ್ಕಂದನಾಡುತಿಹೆ ನೀಡಿ ನವಚೇತನ,
ಶರಣ ಸಂಗವ್ಯಸನಿ ನಮೋ ಅನುಭಾವ ನಿಕೇತನ;

ಶರಣರಾತ್ಮಾರ್ಪಣಕೆ ಮಿಡಿದು 'ರಜತರೇಖೆ'ಯ ನೆಳೆದು
ಭಾರತವೀರ ಶ್ರೀಗೆ ಮಣಿದು, ರಸವತ್ ಸಾರವನೆ ಸುರಿದು;
ಹೃದಯ ಗಾನರಸವನೆ ಎರೆದು ನಲಿನಲಿಯುತಿರೆ ಒಲಿದು;
ನೀಡುತಿಹೆ ಈ ಲೋಕ ತಣಿಯೆ ನುಡಿಜೇನ ಕರೆದು;



ಬೆಳವಲದ ಭಾಗ್ಯಸಿರಿ ನೀ ನಾದೆ 'ಕಾವ್ಯ ಶ್ರೀ'
'ಶರಣ ಚರಿತಾಮೃತ'ವುಣಿಸಿ ನಲಿಸ ಸುಖ ಶಾಂತಿ ಶ್ರೀ
ಹಾಡು ಹಾಡು ಬಗೆದುಂಬಿ ಓ, ಕಾವ್ಯಾನಂದ ಕಾವ್ಯಶ್ರೀ
ಶತಾಯುಮಾನ ಪರ್ಯಂತ ಬಾಳಿ ಬೆಳಗು ಬೀರುತ್ತ ಕಾಂತಿಶ್ರೀ

**ಪರಶುರಾಮು ಹ. ಚಿತ್ರಗಾರ**
ಜಾಲಿಹಾಳ

## ಶ್ರೀ ಸಿದ್ಧಯ್ಯ ಪುರಾಣಿಕ 'ಕಾವ್ಯಾನಂದ'ರು

ತಂದೆ, ತಂದೆಯ ತಂದೆ ಸುವಿಶಾಲ ಮನದವರು
ಸಾಹಿತ್ಯ ಸಂಸ್ಕೃತಿಯ ಸಂಗಮದಿ ಮಿಂದವರು
ಶಾಸ್ತ್ರ ಪುರಾಣಗಳ ಹಂದರದಿ ನಿಂದವರು
ಪುಣ್ಯಕಥೆ ಪುರಾಣವ ಹೇಳುತ್ತ ಬಂದವರು
ಪೌರಾಣಿಕರು ಆಗಿ ಖ್ಯಾತಿಯಲಿ ಸಂದವರು
ತಮ್ಮ ತಪಬಲವೆಲ್ಲ ವಂಶಕ್ಕೆ ಎರೆದವರು
ಅವರ ವಂಶದ ಬಳ್ಳಿ ಹರವಾಗಿ ಹಬ್ಬಿಹುದು;
ಆ ಬಳ್ಳಿಯಲಿ ಹೂವು ಹಣ್ಣಾಗಿ ಸಿದ್ಧಿಸಿದ,
ಸಿದ್ಧಯ್ಯ ಕಾವ್ಯದಲಿ ಆನಂದ ವೃದ್ಧಿಸಿದ
'ಜಲಪಾತ' ದೋಪಾದಿ ಧುಮ್ಮಿಕ್ಕಿ ಗರ್ಜಿಸಿದ
'ಕರುಣಾ ಶ್ರಾವಣ' ದಿ ಕೀರ್ತಿಯನು ಮುದ್ರಿಸಿದ,
ಮುದ್ರಿಸಿದ, ಮುದ್ರಿಸಿದ, ಕನ್ನಡದ ಜನಮನವ
ಮುದ್ರಿಸಿದ ಮುದ್ರಿಸಿದ 'ಕಾವ್ಯ ಶ್ರೀ' ಸಂಪದವ!

'ಶರಣ ಚರಿತಾಮೃತ'ವ ಉಣಿಸುತಿಹ ಈತ
ಕರ್ತವ್ಯ ದಕ್ಷತೆಗೆ ಮಾದರಿಯ ಗೀತ
ಕಾವ್ಯಾನಂದನಾಗಿ ಕರೆಯುವನು ಜೇನು
ಸಿದ್ಧಯ್ಯ ಪುರಾಣಿಕ, ಕನ್ನಡದ ಧೇನು;

—ಜಿ. ಎಸ್. ಅನ್ನದಾನಿ

## ಸ್ನೇಹ-ಸಂಚಯ

ಸ್ನೆಹ ಸಕ್ಕರೆ
ಒಲವಿನೀಕರೆ
ಏನು ಅಕ್ಕರೆ ನಿಮ್ಮದು !
ಹಾಸು ಹೊಕ್ಕಿರೆ
ಮಮತೆ ತೆರೆತೆರೆ
ಪಡೆದ ಭಾಗ್ಯವು ನನ್ನದು !

ವಿದ್ಯೆ, ವಿನಯ :
ಸ್ವರ್ಗ ಕಲಶವು-
ಹೊತ್ತ ಕನ್ನಡ ಪೂಷಣ !
ಬಾಳ ಬುತ್ತಿಯು
ಕಾವ್ಯ ನೀಡುವ
ಜಾಣ, ಕನ್ನಡ ಭೂಷಣ !!

ಇರುವ ಹಿರಿತನ
ಇಳುಹಿ ಕೆಳೆತನ-
ಮೆರೆದು ನಡೆವಿರಿ ಹತ್ತಿರ
ತಮ್ಮನೆನ್ನತ
ಜೊತೆಯೆ ನಡೆಸುತ
ಬೆಳೆಸುತಿರುವಿರಿ ಎತ್ತರ !

ಕಾವ್ಯ ನದಿಗಿದೆ
ರಸದ ಸೇತುವೆ
ಶ್ರದ್ಧೆ ಜೀವನ ಸಾಥಿಯು
ನಿಮ್ಮ ಸ್ನೇಹದ
ರಕ್ಷೆ ಸಂತತ
ನನ್ನ ಬಾಳಿಗೆ ಸ್ಫೂರ್ತಿಯು

ಬಾಳ ಸರಸಿಯ
ಮೇಲೆ ಅರಳಿದ
ಸ್ನೇಹಸಾರ ಸರೋಜವು
ಬೀರೆ ಪರಿಮಳ
ಗಾಳಿ ನೆಲಜಲ
ಕೂಡಿಕೊಳುತಿದೆ, ಓಜವು

ಬಗೆಯು ಮಂದಿರ
ಭಾವ ಸುಂದರ
ಸ್ನೇಹ ಚಂದಿರ ನಕ್ಕರೆ
ನಮ್ಮ ನಿಮ್ಮಯ
ಸ್ನೇಹ ಸಂಚಯ
ಹೃದಯ ಉಭಯರ ಉಕ್ಕಿರೆ

ಸ್ನೇಹ ಕೋಕಿಲ-
ವಿತ್ತ ಕೂಜನ
ಹೊತ್ತ ಉಪವನ ಧನ್ಯವು
ಎಲ್ಲಿ ಹೋದರು
ಸೊಲ್ಲು ಧ್ವನಿಪುದು
ಸ್ನೇಹನಾಗದು – ಅನ್ಯವು !

–ಇಟಗಿ ರಾಘವೇಂದ್ರ



# ಕಾವ್ಯಾನಂದರ ಕಾವ್ಯ ವಾಣಿ

( "ಮೊದಲು ಮಾನವನಾಗು" ಕಾವ್ಯ ಸಂಗ್ರಹದಿಂದ )

**ಕೋತಿಯಿದೆ_ಜಾಗೃತೆ !**

ಎಲ್ಲ ಯತ್ನವ ಮಾಡಿ ಒತ್ತು ಗುಂಡಿಯ ಬಳಿಗೆ
ಕೋತಿ ಬಾರದ ಹಾಗೆ ನೋಡಿಕೊಳ್ಳೋಣ !
ಕೈ ಮೀರಿ ಕೋತಿ ಬಂದರು ಸಹಿತ ಅದಕೆ
ಹೆಂಡ ಸಿಕ್ಕದ ಹಾಗೆ ಏರ್ಪಾಡು ಮಾಡಿಕೊಳ್ಳೋಣ

**ಪೌರನ_ಕರ್ತವ್ಯ**

ಊರೂರು ಕಿತ್ತೂರು
ಮನೆ ಮನೆಯೂ ದುರ್ಗ
ಪ್ರತಿ ಪೌರನ ಮನೆಯಲ್ಲಿದೆ
ಸ್ವಾತಂತ್ರ್ಯದ ಸ್ವರ್ಗ

**ಮಾನಸಿಕ ಗುಲಾಮಿ**

ನಮ್ಮ ಮನೆಯಲ್ಲಿಯೇ ಹೆರವರಾದೆವು ನಾವು
ಇದನು ನೆನೆದಾಗೊಮ್ಮೆ ಉಕ್ಕುವದು ನೋವು
ಬಂದ ಅತಿಥಿಯೇ ಇಂದು ಒಡೆಯನು
ಅವನಿಗೇ- ಹಿಡಿ ನೀನು ಕೊಡೆಯನು
ಕಲಿತು ಬಿಡು ನೀ ಅವನ ನುಡಿಯನು
ಕಲಿತುಬಿಡು ನೀ ಅವನ ನಡೆಯನು

**ಹಂಗಿಲ್ಲದ್ದ ವಿಸಯುವೇ ಶ್ರೇಷ್ಠ !**

ಹಂಗಿನಮೃತವಲ್ಲ ಹಂಗಿಲ್ಲದಂಬಲಿಯು
ನಾನ ದುಡಿದಂಬಲಿಯು ಕರುಣಿಸುತಿರು
ನಂಜನುಂಡರು ಜಿಹ್ವೆ ನಂಜನುಗುಳದ ಹಾಗೆ
ನಯವನೇ ಅನವರತ ಕಲಿಸುತ್ತಿರು

**ಆದಮ್ಯ ಅಸ್ತಿತ್ವ**

ಒಮ್ಮೆ ಹಾಲಾಹಲವ
ಕುಡಿದು ಬದುಕಿಹ ಶಿವನು
ನಿತ್ಯವೂ ನಂಜೇಂಟಿ
ಬದುಕಿರುವೆ ನಾನು !

**ಅಂಧ ಭಕ್ತಿಗೆ ಆಹ್ವಾನ**

ಜಿಡ್ಡಿಗೇ ಅಡ್ಡಬಿದ್ದು
ದಿಂಡುರುಳಿ ಎದ್ದು
ಬೇಡಿಕೋ ವರವ
ಮಿದುಳಿನ ಮಜ್ಜೆಗೇ ಎಣ್ಣೆ ಮಜ್ಜನ ಗೈವ
ಮಹಾ ವರವ

**ಸೂಕ್ಷ್ಮ ಸಂವೇದನೆಯು ವಿರಾಟ ಸ್ವರೂಪ**

ಒಡೆದ ಕನಸುಗಳ ಚೂರನು ತುಳಿದು
ರಕ್ತ ಬಸಿಯುತಿದೆ ಕಾಲಲ್ಲಿ

**ಆದರ್ಶ ನಿಜಸ್ವರೂಪ**

ಆದರ್ಶದ ಹರಿದರಿವೆಯು ತೇಪೆಯು
ಜೋಳಿಗೆ ಹಿಡಿದಿಹೆ ಕೈಯಲ್ಲಿ



**ಅಹಂಕಾರದ ಅರಿವು**

ಕಂಡಿಹೆನೆಂಬುವ ಕಳ್ಳಿಹ ಹಾಲಿದೊ
ಕುರುಡುಗೊಳಿಸಿಹುದು ;ನಯನವನು !

**ಅರಿವಿಲ್ಲದ ಇರವು ಅನರ್ಥಕ**

ಬತ್ತಿಯೆ ಇಲ್ಲದ ಮೇಣಬತ್ತಿಯಿದೆ
ಏನು ಮಾಡಲೀ ಮಯಣವನು ?

**ಬದುಕಿನ ಹಕ್ಕು**

ಬದುಕಗೊಡಿ ನನ್ನನೂ ಬದುಕಗೊಡಿರಿ
ಘಟನೆ ನೀಡುವ ಮೂಲಭೂತ ಹಕ್ಕುಗಳಲ್ಲ
ನಟನೆ ನೀಡುವ ದಾನದಯೆಯ ಬಿಕ್ಕೆಗಳಲ್ಲ
ಇಲ್ಲ ನನ್ನಿಷ್ಟದೊಲು ಇರಲು ಬಿಡಿರಿ
ಕುಣಿಯ ಬೇಡಿರಿ ನೀವು ನನ್ನ ಮೇಲಡರಿ
ಬದುಕಗೊಡಿ ನನ್ನನೂ ಬದುಕಗೊಡಿರಿ !

**ಬೆಳಕಿನ ಭಯ**

ಕತ್ತಲೆಯಲಿ ಹೇಗೋ ಪಾರಾಗಬಹುದು
ಬೆಳಕಿನಲೇ ಭಯವಣ್ಣಾ
ಹೊತ್ತು ಮುಳುಗಿದರೆ ಮುಳುಗಲಿ
ಕತ್ತಲಾದರೆ ಆಗಲಿ
ನಿಂತು ಮುಂದೆ ಹೋಗು
ಕಡೆದು ಮುಂದೆ ಸಾಗು
Halt and Proceed

**ಸಾಹಿತ್ಯಕ್ಕೆ ಸಮಯದ ಪಾಠ**

ಬಾಳ ಬೆತ್ತಲೆ ಚಿತ್ರ ಬಯಸಬೇಡ
....ರಾಡಿಯೇ ಬೇಕೆಂದು ಕಾಡಬೇಡ
ಸಹೃದಯ ಕಾಡಬೇಡ

**ಅನ್ಯಾಯಕ್ಕೊಂದು ಆಹ್ವಾನ !**

ಏ ಕುರುಡಿ
ತೂಗುತಲೆ ಬಂದಿರುವೆ ಯುಗ ಯುಗದಿ
ಮಾಡಿರುವರಾರು ನಿನ್ನ ತೂಕವ ನಿಗದಿ ?
ಒಪ್ಪುತಲೆ ಬಂದಿಹೆವು ನಿನ್ನ ತೂಕವ ನಾವು
ಚೌಕಸಿಯ ಮಾಡದಲೆ । ಬೆಲ್ಲ ಎಂದಿತ್ತೆ ಬೇವು !
......ತೂಕ ಸರಿಯಿಲ್ಲೆನುವ ಕೆಚ್ಚ ತೋರಿದ ಕಲಿಗೆ
ಸಾಮಾನೆ ಸಿಗದಾಯ್ತು
ಉಪವಾಸ ಗತಿಯಾಯ್ತು

**ಮೊದಲು ಮಾನವನಾಗು !**

ರಾಜ ಕಾರಣಿಯಾಗು
ರಾಷ್ಟ್ರಭಕ್ತನೆ ಆಗು
ಕಲೆಗಾರ ವಿಜ್ಞಾನಿ ವ್ಯಾಪಾರಿಯಾಗು
ಏನಾದರೂ ಆಗು
ನೀ ಬಯಸಿದಂತಾಗು
ಏನಾದರೂ ಸರಿಯೆ
ಮೊದಲು ಮಾನವನಾಗು



( "ಮಾನಸ ಸರೋವರ" ಕಾವ್ಯ ಸಂಗ್ರಹದಿಂದ )

**ಚಿತ್ತ ಭೂಮಿಯು ಸತ್ಯ !**

ನಿತ್ಯವೂ ಹೊಸ ಆಸೆ ಅಂಕುರಿಸಬಹುದಿಲ್ಲಿ
ನಿತ್ಯವೂ ಅಂಕುರವು ಕಮರಬಹುದು !
ಚಿತ್ತ ಭೂಮಿಯು ಮಾತ್ರ ಫಲವತ್ತವಾಗಿರಲಿ
ಮತ್ತೆ ಹೃದಯಾರಾಮ ಕೊನರಬಹುದು !

**ಅಂತರಂಗದ ಅರಿವು**

ಇಲ್ಲೆ ನಂದನವಿಲ್ಲೆ ಮಸಣವು
ಮೃತ್ಯು ಲಕ್ಷ್ಮಿಯ ವಾಸವು
ಇಲ್ಲೆ ನಾಶವು ಇಲ್ಲೆ ನರಕವು
ಬಯಸಿದೊಡೆ ಕೈಲಾಸವು !

**ನಡೆದರೇ ಪಡೆಯುವದು**

ಮುಂದೆ ನಡೆದರೆ ದಿವ್ಯ ಪಯಣವು
ಮುಳುಗೆ ಸಲಿಲ ಸಮಾಧಿಯು !
ನಡೆಯದಿದ್ದರೆ ಮಡಿಯದಿರುವೆಯು ?
ನಡೆವುದೊಂದೇ ಹಾದಿಯು !

**ನನ್ನ ಹಿಗ್ಗಿನ ರಹಸ್ಯ !**

ಯಾರಾರಿಗುತ್ತರವ ಹೇಳಲಾ "ನಾನಾರು" ?
ಎಂಬ ಪ್ರಶ್ನೆಗೆ ತಾಯಿ ಸಾಕಾಯಿತು !
"ನಾನಾರು" ? ಎನ್ನುವರು "ನೀನಾರು" ? ಎಂದಿಲ್ಲ
ಈ ಹಿಗ್ಗು ಕಡೆತನಕ ಬೇಕಾಯಿತು !

**ನಿನ್ನ ಬ್ರಹ್ಮ ನೀನೇ**

‘ಹರಿ ಹಾಯದಿರು ಹೆರರ ಮೇಲೆ ಕೆಳೆಯ
ಈ ನಗುವ ನಂದನವ
ಮಸಣ ಮಾಡಿದವ ನೀನೇ !
ಈ ಮಸಣದಲಿ ಮತ್ತೆ
ವನ ಬೆಳೆಸುವ ನೀನೇ !
ನಿನಗೆ ನೀನೇ, ನಿನಗೆ ನೀನೇ
ನಿನ್ನ ಕೆಡಿಸುವವ ನೀನೇ !
ನಿನ್ನ ಸರಿಪಡಿಸುವವ ನೀನೇ !

**ಸತ್ಯದ ಫಲ !**

ಹಾಲಾಹಲವ ಕುಡಿದು ಶೂಲವನ್ನೇರಿಯೂ
ಸೋಲನೊಪ್ಪದ ಮತಿಯೆ ನನಗಿರುವ ಆಶೆ
ಆಳಾಗಿ ದುಡಿಸಿದರು ಕೀಳಾಗಿ ನಡೆಸಿದರು
ದೇಹಿಯೆನ್ನದ ಧೃತಿಯೇ ನಾ ತೊಟ್ಟ ಭಾಷೆ
......ನಿನಗೆ ಮೊಳಕಾಲೂರಿ ಸುಖವ ಪಡೆವುದಕಿಂತ
ನಿನ್ನನೆದುರಿಸಿ ಪಡೆವ ದುಃಖವೇ ಮೇಲು ?

**ಸಮಾಜವಾದಿಯ ಸಂದೇಶ**

ಈ ಕೆರೆಯ ತೂಬುಗಳ ಬಾಯ್ಮುಚ್ಚಿ ನೀರಿನಲಿ
ಕಮಲ-ಕೇಳೀವನವ ಬೆಳೆಸಬೇಡ !
ಮತ್ತೆ ತುಂಬಲಿ ಬಿಡಲಿ, ನೀರು ಬಿಡು ನೀರು ಬಿಡು
ನೌಕಾವಿಹಾರಕ್ಕೆ ಉಳಿಸಬೇಡ !

ಸಂಪಾದನೆ
“ **ಮೇಘಮಿತ್ರ** ”

# ಕಾವ್ಯಾನಂದರ ಕೃತಿಗಳು

ಸಂಕ್ಷಿಪ್ತ ಪರಿಚಯ (ಪ್ರಶಸ್ತಿಯೊಂದಿಗೆ)

## ಕವಿತಾ ಸಂಕಲನಗಳು

### ೧. ಜಲಪಾತ

ಪ್ರಥಮ ಕವಿತಾ ಸಂಗ್ರಹ. ಶ್ರೀ ದ. ರಾ. ಬೇಂದ್ರೆ ಅವರು ಈ ಕೃತಿಯನ್ನು ಕುರಿತು ಹೇಳುತ್ತಾರೆ–

“ಕಾವ್ಯಾನಂದರಲ್ಲಿ ಭಾವನೆಯ ವಾಯುವೇಗವೂ ಬುದ್ಧಿಯ ಅಗ್ನಿಗುಣವೂ ಸೇರಿಕೊಂಡಿವೆ. ಕಾವ್ಯಾನಂದರ ಕಾವ್ಯ ರಚನೆಯ ಅಸ್ತಿಭಾರಕ್ಕೆ ತತ್ವಗಳ ತೂಕವಿರುವದರಿಂದಲೇ ಅವರ ನುಡಿಗಳಲ್ಲಿ ಬಂಕಿಯ ಜತೆ ಜತೆಗೆ ಬೆಳಕು ನುಗ್ಗುತ್ತದೆ.”

### ೨. ಕರುಣಾ ಶ್ರಾವಣ

ಕವನ ಸಂಕಲನ. ಕನ್ನಡದ ಪ್ರಸಿದ್ಧ ಲೇಖಕ ಶ್ರೀ ಡಿ. ವ್ಹಿ. ಗುಂಡಪ್ಪನವರ ಮಾತುಗಳಲ್ಲಿ ‘‘ಕರುಣಾ ಶ್ರಾವಣ”ದ ಪ್ರಶಸ್ತಿ ಹೀಗಿದೆ.

‘‘ಕರುಣಾ ಶ್ರಾವಣದಲ್ಲಿ ಕಾವ್ಯಧಾರೆ ಜೋರಾಗಿಬಂದಿದೆ. ಹೊಸ ಹೊಸ ಕಲ್ಪನೆಗಳು, ಹೊಸ ಹೊಸ ಉಪಮಾನಗಳು, ಹೊಸ ಹೊಸ ಪ್ರಾಸಗಳು, ಹೊಸ ಹೊಸ ಕುಣಿತಗಳು. ಎಲ್ಲ ಸೊಗಸು”

### ೩. ಮಾನಸ ಸರೋವರ

ಕವಿತಾ ಸಂಗ್ರಹ. ಮೈಸೂರ ಸರಕಾರದಿಂದ ಬಹುಮಾನ ಪಡೆದ ಕೃತಿ. ಕನ್ನಾಡಿನ ಸಿಂಗಾರ ಕವಿ ಶ್ರೀ ಪು. ತಿ. ನರಸಿಂಹಾಚಾರ ಅವರ ದೃಷ್ಟಿಯಲ್ಲಿ–

''ಕಾವ್ಯಾನಂದರ ಕವನಗಳು'' ಹೂವುಗಳ ಹೃದಯವನು ಹೂ ಬಿಸಿಲು ಹೊಕ್ಕಂತೆ ನಮ್ಮ ಮನಸ್ಸನ್ನು ಹೊಗುತ್ತವೆ. ಕಾವ್ಯಾನಂದರ ಶೈಲಿ ಬಹಳ ಹಸನಾದ ಶೈಲಿ. ಅವರಿಗೆ ತಿರುಳ್ಗನ್ನಡದ ಸರಣಿ ಗೊತ್ತು. ಈ ಸಂಗ್ರಹದಲ್ಲಿರುವ ಸುಂದರ ಕವನಗಳನ್ನು ತಮ್ಮ ಶುದ್ಧವೂ, ಸುಸ್ಕೃತವೂ ಸದ್ ಭಾವಪೂರ್ಣವೂ ಆದ ಮನಸ್ಸಿನಿಂದ ಸ್ವಚ್ಛ ಕನ್ನಡದ ಮಾತಿನಲ್ಲಿ ನಿರರ್ಗಳವಾಗಿ ಹರಿಯ ಬಿಡುತ್ತಿರುವ ಕಾವ್ಯಾನಂದರನ್ನು ನಾನು ಮನಃ ಪೂರ್ವಕವಾಗಿ ಅಭಿನಂದಿಸುತ್ತೇನೆ."

## ೪. ಕಲ್ಲೋಲ ಮಾಲೆ

ಕವಿಯ ಇತ್ತೀಚಿನ ಕೃತಿಗಳಲ್ಲಿ ಒಂದು ಭಾವಗೀತೆ, ಅನುಭಾವ ಗೀತೆ, ಗದ್ಯಗೀತೆಗಳ ಸಂಕಲನ. ಓರ್ವ ವಿಮರ್ಶಕರ ದೃಷ್ಟಿಯಲ್ಲಿ ಕಲ್ಲೋಲ ಮಾಲೆ ಪಡೆದ ಕೀರ್ತಿಯಿದು–

''ಭಾವಗೀತೆಗಳಿಂದ ಅನುಭಾವ ಗೀತೆಗಳ ವರೆಗೆ ಹರಹುಗೊಂಡಿರುವ ಕಾವ್ಯಾನಂದರ ವಾಗ್ಲಹರಿ ಈ ಸಂಕಲನದಲ್ಲಿ ಅವರ ಸುಪ್ತ ಚೇತನವೊಂದನ್ನು ಬೆಳಕಿಗೆ ತಂದಿದೆ. ಅವರ ಅಂತರಂಗದಲ್ಲಿ ಹೊತ್ತಿಕೊಂಡ ವಿಚಾರದೀಪ್ತಿಯ ಬೆಳಕಿಗೆ ಅವರ ಮೃದು ಮಧುರ ಮಾತುಗಳು ಅತ್ಯಂತ ಅನುಕೂಲ ವಾಹಕಗಳಾಗಿವೆ. ''ಕಲ್ಲೋಲ ಮಾಲೆ'' ಕವನ ಚಿಂತನ ಪರತೆಯ ಹೊಸ ಪದರೊಂದನ್ನು ತೆರೆದು ತೋರಿಸುತ್ತದೆ. ದರ್ಶನ ಕಣ್ಣು ತೆರೆದಿದೆ.''

## ೫. ವಿಕಾಸ ವಾಣಿ

ಕವಿತಾ ಸಂಕಲನ. ವಿದ್ವಾನ್ ಮಾಸ್ತಿ ನರಸಿಂಗರಾಯರ ದೃಷ್ಟಿಯಲ್ಲಿ–

''ವಿಕಾಸವಾಣಿಯಲ್ಲಿ ಕಾವ್ಯಾನಂದರು ರಾಷ್ಟ್ರಧುರೀಣರಾಗಿದ್ದಾರೆ. ದೇಶದ ಏಳಿಗೆಗಾಗಿ, ಜನಗಳ ಹಿತಕ್ಕಾಗಿ ಕವಿಗಿರುವ ಕಾವು ಈ ಪದ್ಯಗಳಲ್ಲಿ ಕಾಣುವದು."



## ೬. ಮೊದಲು ಮಾನವನಾಗು

ಕವನ ಸಂಕಲನ. ಡಾ. ವ್ಹಿ. ಕೆ. ಗೋಕಾಕರಿಂದ ಈ ಸಂಕಲನಕ್ಕೆ ದೊರೆತ ಗೌರವ ಇದು–

''ಈಗ ಇಪ್ಪತ್ತು ವರ್ಷಗಳ ಮೇಲಾಗಿ ಶ್ರೀ ಸಿದ್ಧಯ್ಯ ಪುರಾಣಿಕರನ್ನು ನಾನು ಬಲ್ಲೆ. ಜೀವನ ದೃಷ್ಟಿಯಲ್ಲಿ, ಸಾಹಿತ್ಯದಲ್ಲಿ, ಆಡಳಿತದಲ್ಲಿ ಎಲ್ಲ ದೃಷ್ಟಿಯಿಂದಲೂ ಅವರು ಬೆಳೆದಿದ್ದಾರೆ.

ಮಾನವಾಂತಃಕರಣವೇ ಈ ಸಂಗ್ರಹದ ಪ್ರಧಾನ ವಸ್ತುವಾಗಿದೆ. ರಸವಂತಿಕೆಯಿಂದ ಕವನಗಳು ಹೃದಯಸ್ಪರ್ಶಿಯಾಗುತ್ತವೆ. ಈ ಕವನಗಳಲ್ಲಿ ರಸವಂತಿಕೆಯಿದೆ.

ಕನ್ನಡದ ಜನಕ್ಕೆ ಆಧುನಿಕ ಕನ್ನಡದ ಕಾವ್ಯದ ಸಿದ್ಧಿಯನ್ನು ಒಯ್ದು ಮುಟ್ಟಿಸುವ ಕಾರ್ಯದಲ್ಲಿ, ಶ್ರೀ ಪುರಾಣಿಕರು ಶ್ಲಾಘ್ಯ ಪಾತ್ರವನ್ನು ವಹಿಸಿದ್ದಾರೆ.''

## ೭. ತುಪ್ಪಾ ರೊಟ್ಟಿ, ಗೇ ಗೇ ಗೇ

ಮಕ್ಕಳ ಕವಿತಾ ಸಂಕಲನ. ಕೇಂದ್ರ ಸರಕಾರದಿಂದ ಬಹುಮಾನಗಳಿಸಿದ ಕೃತಿ. ಕನ್ನಡದ ಒಂದು ಪ್ರಸಿದ್ಧ ಸಾಪ್ತಾಹಿಕದ ದೃಷ್ಟಿಯಲ್ಲಿ–

"ಸುಲಭ ಶೈಲಿಯಿಂದ ಹಾಗೂ ಉತ್ತಮ ಪ್ರಾಸದಿಂದ ಇದರಲ್ಲಿರುವ ಇಪ್ಪತ್ತು ಪದಗಳು ಮಕ್ಕಳ ಮನಸ್ಸಿನ ವಿಕಾಸಕ್ಕೆ ಅನುಕೂಲವಾಗುವಂತೆ ಅವೆ......ಪದಗಳು ಮಕ್ಕಳ ಮನಸ್ಸಿಗೆ ಆನಂದವನ್ನೂ ಕೊಡುತ್ತವೆ. ಈ ದೃಷ್ಟಿಯಲ್ಲಿ ಕಾವ್ಯಾನಂದರು ಅಭಿನಂದನಾರ್ಹರು"

## ನಾಟಕಗಳು

೮. ಆತ್ಮಾರ್ಪಣ

೯. ರಜತ ರೇಖೆ

೧೦. ಭಾರತ ವೀರ

೧೧. ಬಿ. ಎ.

೧೨. ಬೆಳವಡಿ ಮಲ್ಲಮ್ಮ

೧೩. ಕಿತ್ತೂರ ಚನ್ನಮ್ಮ

ಈ ಆರು ನಾಟಕಗಳಲ್ಲಿ "ಆತ್ಮಾರ್ಪಣೆ" ವಿಶೇಷ ಪ್ರಸಿದ್ಧಿ ಪಡೆದ ಗದ್ಯನಾಟಕ. "ರಜತ ರೇಖೆ" ಬಾನುಲಿ ರೂಪಕಗಳ ಸಂಗ್ರಹ. ಜನಪ್ರಿಯತೆ ಪಡೆದುದಷ್ಟೇ ಅಲ್ಲ ವಿಶ್ವವಿದ್ಯಾಲಯುದ ಪಾಠ್ಯಕ್ರಮದಲ್ಲಿ ಸ್ಥಾನ ಪಡೆದ ಒಂದು ಕನ್ನಡದ ಅಪೂರ್ವ ರೇಡಿಯೋ ನಾಟಕ ಸಂಕಲನ.

" ಭಾರತವೀರ " ಸರಕಾರದಿಂದ ಪ್ರಶಸ್ತಿ ಪಡೆದ ಗದ್ಯ ನಾಟಕ. "ನಾಟಕದ ಕಥಾವಸ್ತು ಕಾಲಕ್ಕೆ ತಕ್ಕುದಾಗಿದೆ. ಶೈಲಿ ಸರಳವಾಗಿದ್ದರೂ ಅರ್ಥಗರ್ಭಿತವಾಗಿದೆ. ಅದರಲ್ಲಿ ಸಂಭಾಷಣೆಗಳು ನೆನಪಿಡುವಂತಿವೆ. ದೇಶ ಪ್ರೇಮ ಉಕ್ಕಿಹರಿಯುವಂತೆ ನಾಟಕ ರಚಿಸಿದ್ದಾರೆ." ಇದನ್ನು ಓದಿದವರಿಗೆ ಬಂಗಾಲಿ ಭಾಷೆಯ ದ್ವಿಜೇಂದ್ರಲಾಲರಾಯರ ಐತಿಹಾಸಿಕ ನಾಟಕಗಳ ನೆನಪಾಗದಿರದು.

ಇನ್ನುಳಿದ ' ಬಿ. ಎ." "ಬೆಳವಡಿ ಮಲಮ್ಮ" ಹಾಗು ''ಕಿತ್ತೂರ ಚನ್ನಮ್ಮ" ಈ ಮೂರು ನಾಟಕಗಳು ಲೇಖಕರ ಆರಂಭದ ಕೃತಿಗಳು.

## ಕತೆ

೧೪. ತುಷಾರ ಹಾರ

೧೫. ಕಥಾ ಮಂಜರಿ

"ತುಷಾರ ಹಾರ" ಬಿಡಿಮುತ್ತಿನ ಚಿಕ್ಕ ಕತೆಗಳ ಸಂಗ್ರಹ "ಕಥಾ ಮಂಜರಿ" ಕವಿ ಹೃದಯದ ಕಥೆಗಳಾಗಿವೆ.



## ಕಾದಂಬರಿ

೧೬. ತ್ರಿಭುವನ ಮಲ್ಲ

ಸರಕಾರದಿಂದ ಪ್ರಶಸ್ತಿ ಪಡೆದ ಒಂದು ಬೃಹತ್ ಕಾದಂಬರಿ

## ಚರಿತೆ

೧೭. ಶರಣ ಚರಿತಾಮೃತ

ಅರವತ್ತುಮೂವರು ಶರಣ ಜೀವನ ಚರಿತ್ರೆಯ ಬೃಹತ್ ಗ್ರಂಥ. ಈ ಶತಮಾನದ ಮೇರುಕೃತಿಯೆಂದೂ, ಶರಣ ಸಾಹಿತ್ಯ ಚರಿತ್ರೆಯ ವಿಶ್ವ ಕೋಶವೆಂದೂ ಕನ್ನಡ ವಾಙ್ಮಯದಲ್ಲಿ ಹಿರಿಸ್ಥಾನ ಗಳಿಸಿದೆ. ಮಹಾಕವಿ 'ಕುವೆಂಪು' ಈ ರಚನೆಯ ಕುರಿತು ಹೇಳಿದ್ದಾರೆ.

"ಶ್ರೀ ಸಿದ್ಧಯ್ಯ ಪುರಾಣಿಕರು ಅರ್ವಾಚೀನ ಶ್ರೀ ಸಾಮಾನ್ಯರಿಗೆ ಪ್ರಾಚೀನ ಸಾಮನ್ಯತಾ ಶ್ರೀಯನ್ನು ಸುಲಭ ಮಧುರ ರೂಪದಲ್ಲಿ ಉಣ ಬಡಿಸಿದ್ದಾರೆ, ಅವರ ಈ ಶರಣ ಚರಿತಾಮೃತದಲ್ಲಿ"...

## ಸಂಪಾದಿತ ಗ್ರಂಥಗಳು

೧೮. ಕನ್ನಡ ಪದ್ಯ ರತ್ನಾಕರ

೧೯. ಶ್ರೀಕಾರ

೨೦. ಪ್ರಬಂಧ ಮಾಲೆ

೨೧. ಸುಭೋಧ ಸಾರ

೨೨. ಮಹಾತ್ಮಾ ಕನಕದಾಸ ಪ್ರಶಸ್ತಿ

ಈ ಆರು ಕೃತಿಗಳು "ಕಾವ್ಯಾನಂದ"ರಿಂದ ಸಂಪಾದಿಸಲ್ಪಟ್ಟಿವೆ.

# ಸನ್ಮಾನ ಸಮಿತಿ

ಡಾ. ಕೆ. ಮುದ್ದಣ್ಣ ಸಿವ್ಹಿಲ್ ಸರ್ಜನ್, ವಿಜಾಪುರ
ಶ್ರೀ ಎ. ಸಿ ಅಂಗಡಿ ವಕೀಲರು
,, ಆರ್. ಬಿ. ಬಿದರಿ ಅಧ್ಯಕ್ಷರು, ಜಿಲ್ಹಾ ಕಾ. ಸ.
,, ಎಚ್. ಟಿ. ಸಾಸನೂರ ಪ್ರಿನ್ಸಿಪಾಲ ಕೆ. ಸಿ. ಪಿ. ಸೈನ್ಸಕಾಲೇಜ
ವಿಜಾಪುರ
,, ಬಿ. ಎಸ್. ಗಣಾಚಾರಿ ಪ್ರಿನ್ಸಿಪಾಲ ಎಸ್. ಬಿ. ಆರ್ಟ್ಸ ಕಾಲೇಜ
ವಿಜಾಪುರ
,, ವ್ಹಿ. ಬಿ. ನಾಯಕ ಸಂಪಾದಕರು "ಸಂದರ್ಶನ" ಸಾಪ್ತಾಹಿಕ
,, ಜಿ. ಜೆ. ಮಂಗಲಗಿ ಪ್ರಿನ್ಸಿಪಾಲ ದರಬಾರ ಹೈಸ್ಕೂಲ ವಿಜಾಪುರ
,, ಎ. ಟಿ. ಪಾಟೀಲ ಪ್ರಿನ್ಸಿಪಾಲ ಎಸ್. ಎಸ್ ಎಚ್. ಎಸ್.
ವಿಜಾಪುರ
,, ಬಿ. ಜಿ. ಕೇಮುಡಿ ಪ್ರಿನ್ಸಿಪಾಲ ಪಿ. ಡಿ. ಜೆ. ಹೈಸ್ಕೂಲ ವಿಜಾಪುರ
,, ವ್ಹಿ. ಬಿ. ಗಾಂವಕರ ಶಿಕ್ಷಣಾಧಿಕಾರಿಗಳು, ವಿಜಾಪುರ ಜಿಲ್ಹೆ
,, ಟಿ. ಎಸ್. ಚಂದ್ರಶೇಖರ ಎಗ್‌ಝಿಕ್ಯೂಟಿವ್ಹ ಎಂಜಿನಿಯರ
ವಿಜಾಪುರ
,, ಟಿ. ಕೆ. ಪಾಟೀಲ ಎ.ಎ. ಇ. ಓ. ವಿಜಾಪುರ
,, ಎಲ್. ಬಿ. ಮನ್ನಿಕಟ್ಟಿ ಡಿ. ಇ. ಎ.
,, ಟಿ. ಆರ್. ಕುಲಕರ್ಣಿ ಆರ್. ಟಿ. ಓ. ವಿಜಾಪುರ
,, ಗಾಂಜಿಯವರು ಡಿ. ಸಿ ಎಂ. ಎಸ್. ಆರ್. ಟಿ. ಸಿ.
,, ಎಸ್. ಬಿ. ಪೋಲೀಸಗೌಡರ ಎ. ಓ. ನಗರ ಸಭೆ ವಿಜಾಪುರ
ಡಾ. ಎಂ. ಡಿ. ಮಹಿಂದ್ರಕರ ಡಾಕ್ಟರ
ಶ್ರೀ ಶರಣಯ್ಯಾ ವಸ್ತ್ರದ ಎಂ. ಎಲ್. ಎ.
,, ಪಿ. ಎಸ್. ಪಾಟೀಲ ವಕೀಲರು
ಡಾ. ಪ್ರೇಮಾನಂದ ಅಂಬಲಿ ಲಾಯನ್ಸ ಕ್ಲಬ್



ಶ್ರೀ ಎಸ್. ಎಸ್. ತಂಬಾಕೆ ಮರ್ಚಂಟ ಅಸೋಸಿಯೇಶನ್
ಶ್ರೀಮತಿ ಅನ್ನಪೂರ್ಣಾಬಾಯಿ ಬ್ಯಾಕೋಡ ಪ್ರಿ. ಎಸ್. ಎಸ್. ಹೈಸ್ಕೂಲ
,, ವಾಸಂತಿಬಾಯಿ ಜಿಗಜಿನ್ನಿ
ಶ್ರೀ ವ್ಹಿ. ಎನ್. ಜೋಶಿ ಬಾರ ಅಸೋಸಿಯೇಶನ್ ವಿಜಾಪುರ
,, ಎ. ಆರ್. ಕೊಡೇಕಲ್ ವಕೀಲರು
,, ಎಸ್. ಕೆ. ಎಸ್. ಜೆ. ಜಹಾಗೀರದಾರ
,, ಸಿ. ಜೆ. ಪಾಟೀಲ ಪ್ರಿನ್ಸಿಪಾಲ, ಸರಕಾರಿ ಹೈಸ್ಕೂಲ ವಿಜಾಪುರ
,, ಜನಾಬ ಕಿಲೇದಾರ ಪ್ರಿನ್ಸಿಪಾಲ ಅಂಜುಮನ್ ಹೈಸ್ಕೂಲ ವಿಜಾಪುರ
,, ಎಲ್. ಬಿ. ಕೆಂಭಾವಿ ಪ್ರಿನ್ಸಿಪಾಲ ಮರಾಠಿ ವಿದ್ಯಾಲಯ
,, ಬಿ. ಬಿ. ಪಾಟೀಲ ಟಿ. ಡಿ. ಬಿ. ಅಧ್ಯಕ್ಷರು
,, ಎಸ್. ಜಿ. ಜುಕ್ತಿಮಠ ಜಿಲ್ಹಾ ಸಂಗೀತ ಅಕಾಡೆಮಿ ವಿಜಾಪುರ
,, ಪ್ರೇಮಸಿಂಗ ರಾಠೋಡ
,, ಮುಪ್ಪಯ್ಯ ಸ್ವಾಮಿಗಳು ಕುಮಾರ ವಿಜಯ ನಾಟ್ಯಸಂಘ ಚಿತ್ತರಗಿ
,, ಪಂಚಪ್ಪ ತಾಳಿಕೋಟಿ ಮರ್ಚಂಟ
,, ಸಿಸು ಸಂಗಮೇಶ ಸಂಪಾದಕರು ಭಾರತೀ ಸಾಹಿತ್ಯ ಭಂಡಾರ
ಪ್ರೊ. ಪಿ. ವ್ಹಿ ವಜ್ರಮಟ್ಟಿ } ಕಾರ್ಯದರ್ಶಿಗಳು
ಶ್ರೀ ಶಂ. ಗು. ಬಿರಾದಾರ